… ಟಕ ವಿದ್ಯಾವರ್ಧ … ಸಂಘ, …

ಮುಂಬಯಿ ವಿಶ್ವವಿದ್ಯಾನಿಲಯದ ೧೯೩೬ನೆಯ ಇಸವಿಯ
ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ನಿಯಮಿಸಲ್ಪಟ್ಟ ಪಠ್ಯಪುಸ್ತಕ.

ಕಾವ್ಯ ಸಂಗ್ರಹ

ಬೋಧಕವಾದುದೊಂದು ಪ್ರಸ್ತಾವನೆಯಿಂದೊಡಗೂಡಿದೆ.

ಶ್ರೀ ಚಾಮರಾಜ ಮಂದಿರ, ಧಾರವಾಡ

೧೯೩೫

ಬೆಲೆ: ಆರಾಣೆ.

… B. HARIHAR at the TONTADARYA PRESS,
Fort, Dharwar, and
Published by MR. S. Y. GUMGOL, B.A., Hon. Secretary, at the
KARNATAK VIDYAVARDHAKA SANGHA, DHARWAR.

ಪ್ರಸ್ತಾವನೆ.

ನಮ್ಮ ಮನೋಗತವಾಗಿರುವ ಅಭಿಪ್ರಾಯವನ್ನಾಗಲಿ, ಭಾವವನ್ನಾಗಲಿ ಬೇರೊಬ್ಬರಿಗೆ ಶಬ್ದಗಳ ಸಾಹಾಯ್ಯದಿಂದ ತಿಳಿಸಬಹುದು. ಹೀಗೆ ಯಾವುದಾದರೂ ಒಂದು ವಿಷಯವನ್ನು ಶಬ್ದಗಳಿಂದ ವ್ಯಕ್ತಗೊಳಿಸಿದರೆ ಅದು ಗ್ರಂಥವಾಗುವುದು. ಶಬ್ದರೂಪವಾದ ಗ್ರಂಥವು 'ಕಾವ್ಯ', 'ಶಾಸ್ತ್ರ' ವೆಂದು ಎರಡು ವಿಧವಾಗಿರುವುದು. ರಸಾತ್ಮಕವಾಗಿದ್ದು ಸಾಮಾನ್ಯ ಜನರ ಹೃದಯಕ್ಕೆ ಆನಂದವನ್ನುಂಟು ಮಾಡುವುದು ಸಾಹಿತ್ಯ ಸಾಹಿತ್ಯದ ಮುಖ್ಯೋದ್ದೇಶವೇ ಆನಂದ.

ಸಂಸಾರದಲ್ಲಿ ದುಃಖವಿರುವಂತೆ ಸುಖವೂ ಪ್ರಾಯಃ ಇರುತ್ತದೆ. ಈ ಸುಖವೇ ಮನುಷ್ಯನ ಪ್ರವೃತ್ತಿಯನ್ನುಂಟು ಮಾಡುತ್ತದೆ. ಈ ಸುಖವು ನಾನಾ ವಿಧ. ಬಾಹ್ಯೇಂದ್ರಿಯಗಳಿಂದ ಮನಸ್ಸಿನಲ್ಲಿ ಉದ್ಭವವಾಗುವ ಸುಖವು ಬಾಹ್ಯ ಸುಖವು. ಆಂತರಸುಖವು ಅದರಿಂದ ಭಿನ್ನವಾಗಿರುವುದು. ಅದ್ಭುತವಾದ ಸಂಗತಿಯನ್ನು ನೋಡಿದರೆ, ಅಥವಾ ಒಳ್ಳೆಯ ಕಾವ್ಯವನ್ನು ಓದಿದರೆ, ಅಥವಾ ಯಾರಾದರೂ ನಮ್ಮನ್ನು ಪ್ರಶಂಸೆ ಮಾಡಿದರೆ ಉಂಟಾಗುವ ಸುಖವು ಆಂತರ ಸುಖ. ಈ ವಿಧಗಳಲ್ಲದೆ ಆಧ್ಯಾತ್ಮಿಕ ಸುಖವೆಂಬುದೊಂದು ಬೇರೆ ವಿಧದ ಸುಖವಿರುವುದು. ಇವೆಲ್ಲ ಸುಖಗಳಲ್ಲಿ ಸುಖ ಕೊಡತಕ್ಕ ಅಂಶವಿದೆ. ಇದು ರಮಣೀಯತೆಯು.

ಇಂತಹ ರಮಣೀಯತೆಯುಳ್ಳ ಸಂಗತಿಯನ್ನು ಶಬ್ದಗಳಿಂದ ರಮಣೀಯವಾದ ರೀತಿಯಲ್ಲಿ ರಚಿಸಿದರೆ ಆ ಕೃತಿಯು ಕಾವ್ಯವಾಗುತ್ತದೆ. ಈ ರಮಣೀಯತೆಯನ್ನು ರಮಣೀಯ ಭಾಷೆಯಲ್ಲಿ ತಿಳಿಸಬಲ್ಲವನೇ ಕವಿ. ಅವನ ಕೃತಿ ಕಾವ್ಯ. ಕಾವ್ಯಗಳ ಸಮುದಾಯವೇ ಸಾಹಿತ್ಯ. ಕಾವ್ಯದಲ್ಲಿ ಆನಂದವೇ ಮುಖ್ಯ ಫಲವೆಂದು ಹೇಳಬಹುದು.

ಕಾವ್ಯವು ಗದ್ಯ, ಪದ್ಯ ಮತ್ತು ಮಿಶ್ರವೆಂದೂ, ದೃಶ್ಯ, ಶ್ರಾವ್ಯವೆಂದೂ ಎರಡೂ ರೀತಿಯಾಗಿ ವಿಭಾಗಿಸಲ್ಪಟ್ಟಿದೆ. ಪದ್ಯಕಾವ್ಯಗಳಲ್ಲಿ ಸುಪ್ರಸಿದ್ಧವಾದುದು ಮಹಾಕಾವ್ಯ. ಗದ್ಯ ಪದ್ಯಗಳೆರಡೂ ಇರತಕ್ಕ 'ಮಿಶ್ರ' ಕಾವ್ಯವು 'ಚಂಪೂ' ಎನಿಸುತ್ತದೆ. ನಾಟಕಗಳೆಂಬ ದೃಶ್ಯ ಪ್ರಬಂಧಗಳು ಮಿಶ್ರ ಕಾವ್ಯಗಳೆಂದೇ ಹೇಳಬಹುದು.

ಕನ್ನಡ ಸಾಹಿತ್ಯದಲ್ಲಿ ಹನ್ನೆರಡನೆಯ ಶತಮಾನದ ವರೆಗೆ ಮುಖ್ಯವಾಗಿ ಮಹಾಕಾವ್ಯವೇ ಕಂಡು ಬರುವುದು. ಈಗ ಉಪಲಬ್ಧವಾಗಿರುವ ಹಳಗನ್ನಡದ ಗ್ರಂಥಗಳು, ಅದರಲ್ಲಿಯೂ ಪ್ರೌಢವಾದ ಪ್ರಾಚೀನ ಕಾವ್ಯಗಳು, ಸಂಸ್ಕೃತ ಮಾರ್ಗವನ್ನು ಅನುಸರಿಸಿ ಬರೆದಂತಹವು. ಆ ಕಾಲದ ಕನ್ನಡ ಕವಿಗಳೂ ಸಂಸ್ಕೃತ ಆಲಂಕಾರಿಕರ ಮಾರ್ಗವನ್ನನುಸರಿಸಿ ವಿದ್ವಾಂಸರಿಗೆ ಮಾನ್ಯವಾಗುವಂತಹ ಘನವಾದ ಚಂಪೂಕಾವ್ಯಗಳನ್ನು ಬರೆದರು. ಆ ಕಾಲದಲ್ಲಿ ಮಹಾಕಾವ್ಯಕ್ಕೇ ಪ್ರಾಧಾನ್ಯ.

ಕನ್ನಡದ ವೃತ್ತಗಳಲ್ಲಿಯೇ ಬರೆಯಲ್ಪಟ್ಟಿರುವ ವಿವಿಧವಾದ ಹಾಡುಗಳೂ, ದೇವರ ನಾಮಾವಲಿಗಳೂ ಕೀರ್ತನೆಗಳೂ ಇಂದಿಗೂ ಜನರ ಬಾಯಲ್ಲಿ ಕಟ್ಟಿದಂತಾಗಿರುವುವು. ಹನ್ನೆರಡನೆಯ ಶತಮಾನದಿಂದೀಚೆಗೆ ವೀರಶೈವರಲ್ಲಿ 'ವಚನಗಳು' ಎಂಬುದೊಂದು ಸಾಹಿತ್ಯದ ವಿಶಿಷ್ಟ ಪ್ರಕಾರವು ರೂಢಿಯಲ್ಲಿ ಬಂದಿತು. ಇದು ತೋರಿಕೆಯಲ್ಲಿ ಗದ್ಯವಾದರೂ ಪದಗಳಜೋಡಣೆ, ಹೇಳುವಕ್ರಮ ಕೇಳುವವಿಧಗಳನ್ನು ನೋಡಿದರೆ 'ಗದ್ಯ ಕಾವ್ಯ'ವೇ ಆಗಿರುವದೆಂದು ಹೇಳಬಹುದು. ಷಟ್ಪದಿ ಮೊದಲಾದ ಕನ್ನಡ ವೃತ್ತಗಳೆಲ್ಲವೂ ಹಾಡುವುದಕ್ಕೆ ಅನುಕೂಲವಾದುವು. ಅವುಗಳನ್ನು ಜನರು ಇಂದಿಗೂ ಹಾಡುತ್ತಿರುವುದು ಅಲ್ಲಲ್ಲಿ ಕಂಡು ಬರುತ್ತದೆ.

'ಕಾವ್ಯ ಸಂಗ್ರಹ'ದಲ್ಲಿ ಸಂಗ್ರಹಿಸಲ್ಪಟ್ಟ ಕಾವ್ಯಭಾಗಗಳನ್ನೂ ಅವುಗಳ ಕವಿಗಳನ್ನೂ ಕುರಿತು ಬರೆಯುವುದು ಅವಶ್ಯವಾಗಿದೆ. 'ಜೈಮಿನಿಭಾರತ'ವನ್ನು ಬರೆದ ಕವಿ ಲಕ್ಷ್ಮೀಶ. ಸಂಸ್ಕೃತದಲ್ಲಿರುವ ಮಹಾಭಾರತದ ಅಶ್ವಮೇಧಪರ್ವವು ಕನ್ನಡದಲ್ಲಿ ಪರಿವರ್ತಿಸಲ್ಪಟ್ಟಂತಹ ನೀತಿಬೋಧಕವಾಗಿಯೂ ರಸಭರಿತವಾಗಿಯೂ ಇರುವ ಕಥಾನಕಗಳೊಂದಿಗೆ ವಿರಚಿತವಾಗಿರುವ ಈ ಕಾವ್ಯಕ್ಕೆ 'ಕನ್ನಡ ಜೈಮಿನಿಭಾರತ'ವೆಂದು ಹೆಸರು. ಲಕ್ಷ್ಮೀಶ ಕವಿಯು ಭಾರದ್ವಾಜ ಗೋತ್ರದವನಾದ ಅಣ್ಣಮಾಂಕನೆಂಬ ಬ್ರಾಹ್ಮಣನ ಸುತನು. ಆತನ ಜನ್ಮಸ್ಥಳ ಮೈಸೂರ ಪ್ರಾಂತದ ಕಡೂರ ತಾಲೂಕಿನ 'ದೇವನೂರೆಂಬ' ಗ್ರಾಮ. ಕ್ರಿ. ಶ. ೧೬೯೧ ರಲ್ಲಿ ಕವಿ ಈ ಗ್ರಂಥವನ್ನು ಬರೆದಿರುವನೆಂದು ಊಹೆ. ಲಕ್ಷ್ಮೀಶನ ಕಾಲವು ಕ್ರಿ. ಶ. ಸುಮಾರು ೧೭೦೦ ಎಂದು ಹೇಳಬಹುದು. 'ಜೈಮಿನಿಭಾರತ'ವು ವಾರ್ಧಕಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ೩೪ ಸಂಧಿಗಳೂ ೧೯೦೭ ಪದ್ಯಗಳೂ ಉಂಟು. ಲಕ್ಷ್ಮೀಶನ ಬಂಧವು ಲಲಿತವಾಗಿಯೂ ಮನೋಹರವಾಗಿಯೂ ಇದೆ. ಕನ್ನಡ ನಾಡಿನಲ್ಲಿ 'ಜೈಮಿನಿ ಭಾರತ'ವು ಬಹು ಪ್ರಸಿದ್ಧವಾದುದು. ಇದನ್ನು ಓದದ ಕನ್ನಡಿಗರೇ ಇಲ್ಲವೆಂದು ಹೇಳುವದುಂಟು. ಪಂಡಿತರಿಂದ ಪಾಮರರವರೆಗೆ ಎಲ್ಲರ ಆದರಕ್ಕೂ ಈ ಗ್ರಂಥವು ಪಾತ್ರವಾಗಿರುವದು.

‘ಬಸವಪುರಾಣ’ವನ್ನು ಬರೆದ ಕವಿ ಭೀಮಕವಿ. ಈತನ ಕಾಲ ಕ್ರಿ. ಶ. ಸುಮಾರು ೧೩೬೯. ಇವನು ವೀರಶೈವ ಕವಿ. ಇವನ ತಂದೆ ಶಿವಕವಿದೇವ. ತಾನು ಉಭಯಕವಿತ್ವಸಮರ್ಥನೆಂದು ಹೇಳಿಕೊಂಡಿದ್ದಾನೆ. ಈತನು ‘ಭೀಮಕವೀಶ್ವರ ರಗಳೆ’ಯನ್ನು ಬರೆದಿದ್ದಾನೆ. ಇವನ ಇತರ ಗ್ರಂಥಗಳು ಉಪಲಬ್ಧವಿರುವದಿಲ್ಲ. ‘ಬಸವ ಪುರಾಣ’ವು ಭಾಮಿನೀಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಎಂಟು ಆಶ್ವಾಸಗಳೂ, ೬೧ ಸಂಧಿಗಳೂ. ೩೬೨೧ ಪದ್ಯಗಳೂ ಉಂಟು. ಇದರಲ್ಲಿ ಬಸವನ ಚರಿತ್ರೆಯೂ ಅವನು ಮಾಡಿದ ಪವಾಡಗಳೂ ವರ್ಣಿಸಲ್ಪಟ್ಟಿರುವವಲ್ಲದೆ, ಅಲ್ಲಲ್ಲಿ ಶಿವಭಕ್ತರ ಕಥೆಗಳೂ ಹೇಳಲ್ಪಟ್ಟಿವೆ. ಇಂತಹದೊಂದಾದ ‘ಕೋಳೂರು ಕೊಡಗೂಸಿನ ಕಥೆಯು’ ಕಾವ್ಯಸಂಗ್ರಹದಲ್ಲಿ ಉದ್ಧೃತವಾಗಿದೆ. ಈ ಕಾವ್ಯವು ಲಲಿತವೂ ಧಾರಾಳವೂ ಆಗಿದೆಯೆಂದು ಹೇಳಬಹುದು.

‘ಕನ್ನಡಭಾರತ’ದ ಕವಿ ‘ಕುಮಾರವ್ಯಾಸ’ನೆಂದು ಪ್ರಸಿದ್ಧನಾಗಿರುವ ನಾರಣಪ್ಪನೆಂಬ ಬ್ರಾಹ್ಮಣ ಕವಿ. ಈತನು ಸಂಸ್ಕೃತಮಹಾಭಾರತದ ಮೊದಲಿನ ಹತ್ತು ಪರ್ವಗಳನ್ನು ಕನ್ನಡದಲ್ಲಿ ಭಾಮಿನೀಷಟ್ಪದಿಯಲ್ಲಿ ರಚಿಸಿರುವನು. ಈತನ ಕುಲದೇವತೆ ಗದುಗಿನ ವೀರನಾರಾಯಣದೇವರು. ೧೫೦೮ರಿಂದ ೧೫೩೦ರ ವರೆಗೆ ವಿಜಯನಗರದಲ್ಲಿ ಆಳುತ್ತಿದ್ದ ಕೃಷ್ಣರಾಯನ ಪಟ್ಟಾಭಿಷೇಕ ಕಾಲದಲ್ಲಿ ಈ ಗ್ರಂಥವು ಬರೆದ ಹಾಗೆ ತೋರುವದೆಂದು ಕೆಲವರ ಅಭಿಪ್ರಾಯ. ಸುಮಾರು ಕ್ರಿ. ಶ. ೧೪೩೦ರ ಕಾಲದಲ್ಲಿ. ದೇವರಾಯನ ಆಳಿಕೆಯಲ್ಲಿ ಈ ಗ್ರಂಥವು ಬರೆಯಲ್ಪಟ್ಟಿತ್ತೆಂದು ಬೇರೆ ಕೆಲವರ ಅಭಿಪ್ರಾಯ. ‘ಕನ್ನಡ ಭಾರತವು’ ರಸ-ಅಲಂಕಾರಗಳಿಂದ ತುಂಬಿ ತುಳುಕುತ್ತಿರುವುದು. ಅದರ ಶೈಲಿ ಉತ್ತಮವಾದುದು. ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಕೊಂಡಾಡುವರು. ಬ್ರಾಹ್ಮಣಕವಿಗಳ ಕನ್ನಡ ಗ್ರಂಥಗಳಲ್ಲಿ ಕನ್ನಡಭಾರತ’ವೂ ಒಂದು ಪ್ರಧಾನಗ್ರಂಥ.

‘ತೊರವೆಯ ರಾಮಾಯಣ’ದ ಕರ್ತೃ ‘ಕುಮಾರ ವಾಲ್ಮೀಕಿ’ ಯೆಂಬವನು. ಈತನು ವಿಜಾಪೂರ ಜಿಲ್ಲೆಗೆ ಸೇರಿದ ‘ತೊರವೆ’ ಎಂಬ ಊರಿನಲ್ಲಿದ್ದ ಬ್ರಾಹ್ಮಣಕವಿ. ಈತನು ಸಂಸ್ಕೃತವಾಲ್ಮೀಕಿರಾಮಾಯಣವನ್ನು ಕನ್ನಡದಲ್ಲಿ ಪರಿವರ್ತಿಸಿ ಬರೆದನು. ಈತನ ಕಾಲವು ಸುಮಾರು ೧೫೦೧ ಎಂದು ಹೇಳುವರು. ‘ಕುಮಾರ ವಾಲ್ಮೀಕಿ’ ಎಂಬುದು ಕವಿಯ ಬಿರುದು; ಆತನ ನಿಜವಾದ ಹೆಸರು ಗೊತ್ತಿಲ್ಲ. ‘ನರಹರಿ’ ಯೆಂದು ಒಂದು ಕಡೆಗೆ ಹೇಳಿಕೊಂಡಿದ್ದಂತೆ ತಿಳಿಯುತ್ತದೆ. ಈ ಗ್ರಂಥದ ಶೈಲಿಯು ಚೆನ್ನಾಗಿದೆ. ಗ್ರಂಥವು ರಸಭರಿತವೂ ಶ್ರಾವ್ಯವೂ ಆಗಿದೆ. ಇದು ಭಾಮಿನೀಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ೧೧೨ ಸಂಧಿಗಳೂ ೫೦೬೯ ಪದ್ಯಗಳೂ ಇರುತ್ತವೆ.

‘ಕಾವ್ಯ ಸಂಗ್ರಹ’ದೊಳಗಿನ ಕೊನೆಯ ಮೂರು ಕಾವ್ಯಭಾಗಗಳ ಕರ್ತೃಗಳು ನಮ್ಮ ವರ್ತಮಾನಕಾಲದವರಾಗಿರುವುದರಿಂದ ಅವರ ಕಾವ್ಯಗಳ ಹಾಗೂ ಕವಿತಾಶಕ್ತಿಯ ವಿಷಯವಾಗಿ ನಿಶ್ಚಿತವಾದ ಅಭಿಪ್ರಾಯಪಡುವುದೇನೋ ಕಠಿನವಾದ ಮಾತು. ಆದರೂ ಈ ಮೂವರು ಕವಿಗಳು ಶೀಘ್ರ ಕವಿಗಳೂ ಸಮರ್ಥರೂ ಆಗಿರುವರೆಂದು ಹೇಳಿದರೆ ಅತಿಶಯೋಕ್ತಿಯಾಗದು. ‘ಕೊಳಲಗಾನ’ವು ಕರ್ನಾಟಕ ವಿದ್ಯಾವರ್ಧಕ ಸಂಘದ ಚಾಮರಾಜ ಮಂದಿರದಲ್ಲಿ ಹತ್ತೇ ನಿಮಿಷಗಳಲ್ಲಿ ನಿರ್ಮಿತವಾಯಿತೆಂಬ ಕಣ್ಮುಟ್ಟ ಕಂಡ ಸಂಗತಿಯೊಂದೇ ಪ್ರೊ. ಚೆನ್ನಕೇಶವಯ್ಯಂಗಾರ್ಯರ ಕವಿತಾಶಕ್ತಿಯ ಕುರುಹಾಗಿದೆ. ಪ್ರೊ. ಅಯ್ಯಂಗಾರ್ಯರು ಮೈಸೂರ ಪ್ರಾಂತದವರಾದರೂ ಈಗ ನಾಲ್ಕೈದು ವರ್ಷಗಳಿಂದ ಕರ್ನಾಟಕ ಕಾಲೇಜದ ಕನ್ನಡ ಅಧ್ಯಾಪಕರಾಗಿದ್ದು ಅಖಿಲ ಕರ್ನಾಟಕದ ಏಕೀಕರಣಕ್ಕಾಗಿ ಉತ್ತರಕರ್ನಾಟಕಕ್ಕೆ ದಕ್ಷಿಣಕರ್ನಾಟಕದಿಂದ ಬಂದ ರಾಯಭಾರಿಗಳಂತಿದ್ದಾರೆ. ಅವರಂತೆ ಶ್ರೀ. ಸಾಲಿ ರಾಮಚಂದ್ರರಾಯರ ‘ಸಂಕಲ್ಪ’ವೂ ವಾಗ್ಭೂಷಣಕ್ಕಾಗಿ ಹತ್ತೇ ನಿಮಿಷಗಳಲ್ಲಿ ಸಂಘದಲ್ಲಿಯೇ ರಚಿತವಾಯಿತು. ಅವರ ಕಾವ್ಯಗಳೆಲ್ಲ ಆತ್ಮಾನುಭವರಿಪ್ಲುತವಾಗಿರುವುವು. ಅವರ ಹೃದಯ ಸುಸಂಸ್ಕೃತವಾದುದು. ಅವರ ಭಾವನೆಯೂ ಭಾಷೆಯೂ ಗಂಭೀರವಾದವುಗಳು. ಶ್ರೀ. ಕುರಡಿಯವರು ಲೇಖಕರಿದ್ದಂತೆ ಕವಿಗಳೂ ಆಗಿರುವರು. ಆದರ್ಶಭೂತರಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿಗಳ ಚರಿತ್ರೆಗಳನ್ನು ಬರೆಯುವದರಲ್ಲಿ ಶ್ರೀ ನಾರಾಯಣರಾಯರು ಕುಶಲರಿದ್ದಂತೆ ಕಾವ್ಯಗಳನ್ನು ಬರೆಯುವವರಲ್ಲಿಯೂ ನಿಷ್ಣಾತರಿರುವರು. ಅವರಿಂದ ರಚಿತವಾದ ಸಣ್ಣ ಸಣ್ಣ ಕಾವ್ಯಗಳು ಲೋಕಾದರಕ್ಕೆ ಪಾತ್ರವಾಗಿರುವುವು. ‘ನಾನೊಬ್ಬ ಕನ್ನಡಿಗನು’ ಎಂಬೀ ಕಾವ್ಯವು ಶ್ರೀ. ಕುರಡಿಯವರ ಕವಿತಾಶಕ್ತಿಯನ್ನೂ ಸಹೃದಯತೆಯನ್ನೂ ಉತ್ಕೃಷ್ಟ ಶೈಲಿಯನ್ನೂ ಉದಾಹರಿಸುತ್ತದೆ. ಈ ಕವಿತ್ರಯರಿಂದ ಇಂತಿಂತಹ ಕಾವ್ಯಗಳು ಇನ್ನೂ ಹೆಚ್ಚೆಚ್ಚು ರಚಿತವಾಗಲೆಂಬುದೇ ನಮ್ಮ ಅಪೇಕ್ಷೆ.

ಕೃ. ನೆಂ. ಕುಲಕರ್ಣಿ.

ಕಾವ್ಯಸಂಗ್ರಹ.

೧. ಜೈಮಿನಿಭಾರತ.

ಇಪ್ಪತ್ತೆರಡನೆಯ ಸಂಧಿ.

ಸೂಚನೆ॥ ಸತ್ವದಿಂದೊದಗಿದರ್ಕವುತಮಗೆ ರಣ*ಸಾಹ ।
ಸತ್ವದಿಂ ಪ್ರದ್ಯುಮ್ನ ಮೊದಲಾದ ಪಟುಭಟರ್ ।
ಸತ್ವರದೊಳೆಚ್ಚಾಡಿದರ್ಬಭ್ರುವಾಹನಧನಂಜಯರ್ಸಂಗರದೊಳು ।

ಅರಸ ಕೇಳರ್ಜುನಂ ಬೈದು ನೂಕಿದಬಳಿಕ ।
ತರಿಸಿದ ಸುವಸ್ತುಗಳನಧ್ವರದ ತುರಗಮಂ ।
ತಿರುಗಿ ನಿಜನಗರಿಗೆ ಕಳುಹಿ ಬಭ್ರುವಾಹನಂ ಸಮರಕನುವಾಗಿ ನಿಲಲು ॥
ಧರಣಿಮಂಡಲಮಂ ಚತುರ್ಬಲಂ ಗೀರ್ವಾಣ ।
ಸರಣಿಮಂಡಲಮಂ ಧ್ವಜಚ್ಛತ್ರಚಾಮರಂ ।
ತರಣಿಮಂಡಲಮಂ ಚಮೂಪದಹತೋದ್ಧೂತರೇಣುವ್ರಜಂ ಮುಸುಕಿತು ॥೧॥

ಅರ್ಬುದಗಜಂ ಪತ್ತುಕೋಟಿ ಸುವರೂಥಮೆರ ।
ಡರ್ಬುದತುರಂಗಮಂ ಕೂಡಿದ ಪದಾತಿ ಮೂ ।
ರರ್ಬುದಂ ಜೋಡಿಸಿದುದಾಹವಪ್ರೌಢರ್ಸುಬುದ್ಧಿ ಮೊದಲಾದ ಭಟರು ॥
ಸರ್ಬಸನ್ನಾಹದಿಂದೊತ್ತರಿಸಿತೆತ್ತಣ ಚ ।
ತುರ್ಬಲವೊ ಕಮಲಜನ ಸೃಷ್ಟಿಯೊಳದೃಷ್ಟವೆನೆ ।
ಪರ್ಬಿದುದು ನೆಲದಗಲಕಾಬಭ್ರುವಾಹನಂ ತರಿಸಿದಂ ಮಣಿರಥವನು ॥೨॥

ಚಿತ್ರಶೋಭಿತಮಾದ ಮಣಿಮಯವರೂಥಮಂ ।
ಚಿತ್ರಾಂಗದೆಯ ತನೂಭವನಡರ್ದಂ ಕೂಡೆ ।
ಚಿತ್ರಮಾದುದು ಸಮರಮೆಸಡು ಥಟ್ಟಿನ ಚೂಣಿ ಸಂವಣಿಸಿತುರವಣೆಯೊಳು ।

---

* ಪಾಠಾಂತರ— ಭುಜಸಹಾಸತ್ವ

ಮಿತ್ರಮಂಡಲವನೊಡೆದ್ಯೈದುವತಿಭರದಿಂದ ।
ಮಿತ್ರಭಟರಂ ತಾಗಿದರ್ಕಡುಗಲಿಗಳಾಗ ।
ಮಿತ್ರಭಾವದ ನೇಹದಿಂದೆ ಮರುಗದೆ ಮಾಣವಂಭೋರುಹಂಗಳೆನಲು ॥೩॥

ತೆರವಂಗಡದ ಜರ್ಜರವಂ ಗಜದ ಘಂ ।
ಟಾರವಂ ಹಯದ ಹೇಷಾರವಂ ನಡೆವ ಸೇ ।
ನಾರವಂ ಭೇರಿಯ ಮಹಾರವಂ ಬಹಳ ಕಹಳಾರವಂ ಸಂಗಡಿಸಿದ ॥
ಜ್ಯಾರವಂ ಭಟರ ಬಾಹಾರವಂ ದಳದ ಬಂ ।
ಭಾರವಂ ರಣಕಿಲಕಿಲಾರವಂ ಪಟಹ ಢ ।
ಕ್ಕಾರವಂ ಪುದಿದ ನಾನಾರವಂ ಕಿವಿಗತಿಕಠೋರವಂ ತೀವಿತಂದು ॥೪॥

ಸಿಂಧಸೀಗುರಿಛತ್ರಚಾಮರಪತಾಕೆಗಳ್ ।
ಸಂದಣಿಸಿ ಗಗನಮಂ ಮುಸುಕಲ್ಕೆ ತವೆ ಮೂಡಿ ।
ದಂಧಕಾರಂಗಳಂ ಕಿಡಿಸಿದವು ರತ್ನಾಭರಣಕಾಂತಿಗಳ್ಬಪರ ॥
ಕೆಂಧೂಳಡರ್ದ್ದು ನಭಮಂ ಮುಸುಕಿತಾಗ ಸುರ ।
ಸಿಂಧುಪ್ರವಾಹಮುತ್ತುಂಗಶೋಣಾಚಲದ ।
ಬಂಧುರತಟ ಪ್ರದೇಶದೊಳೊಪ್ಪುವೊಜ್ಜರದ ನದಿಯೆಂಬ ತೆರನಾಗಲು ॥೫॥

ಚೂಣಿಯೊಳ್ಬೆರಸಿ ಪೊಯ್ದಾಡಿದರ್ತಮತಮಗೆ ।
ಬಾಣತೋಮರಪರಶುಚಕ್ರವಸಿ*ಮುದ್ಗರಕೃ ।
ಪಾಣಡೊಂಕಣಿಕುಂತಸುರಗಿಶಲ್ಯ(ಕ)ಶಕ್ತಿ ಮೊದಲಾದ ಕೈದುಗಳೊಳು ॥
ಕೇಣಮಿಲ್ಲದೆ ಚಾರಿಚೆಳಕಚಾಳಿಯಚದು ।
ಸಾರ್ಣಿಲಾಘವಪಂಥಪಾಡುಗಳನರಿದು ಬಿ ।
ನ್ನಾಣದಿಂ ಗಾಯಗಾಣಿಸಿದರತಿಬಲರಲ್ಲಿ ನಾನಾಪ್ರಹಾರದಿಂದೆ ॥೬॥

ತೂಳಿಸಿದರಾನೆಯಂ ಜೋದರುರವಣಿಸಿ ದೂ ।
ವಾಳಿಸಿದರುಬ್ಬೆದ್ದು ರಾವುತರ್ತೇಜಿಯಂ ।
ಕೇಳಿಸಿದರಾಹವದ ನಾಟ್ಯಮಂ ರಣರಂಗದೊಳ್ಚಟುಲಪಟುರಥಿಕರು ॥
ಏಳಿಸಿದರಾಳ್ತನದ ಪಂತಮಂ ಕಾಲವ ।
ರ್ಕೇಳಿಸಿದರಹಿತರಂ ಪೊಯ್ದಾಡಿ ತಲೆಯಂ ನಿ ।
ವಾಳಿಸಿದರಾಳ್ದಂಗೆ ಕೈದುಗಳ ಹೋರಟಿಯ ಖಣಿಕಟಿಲರಭಸದಿಂದೆ ॥೭॥

* ಮೂಲಪಾಠ— ಶಲ್ಯಹ.

ಕಾರ್ಮುಗಿಲ ಸಿಡಿದ ರವದಂದವಾಗಿರ ಕರೆದ ।
ಕಾರ್ಮುಕಧ್ವನಿ ಮಿಂಚಿನಂತೆ ಪೊಳೆಪೊಳೆವ ಪೊಂ ।
ದೇರ್ಮೆರೆಯೆ ಶರವರ್ಷಮಂ ಕರೆಯುತರ್ಜುನನ ಸನ್ಮುಖಕೆ ಬಂದುನಿಂದು ॥
ಮಾರ್ಮಲೆಯಬಾರದಯ್ಯನೊಳೆಂದು ಕಂಡು ನಾಂ ।
ಕೂರ್ಮೆಯಿಂದೆರಗಿದೊಡೆ ಜರೆದೆಲಾ ರಣದೊಳಿ ।
ನ್ನಾರ್ಮೊಗೆದೊಡಂ ಜಯಿಸಿದೊಡೆ ನಿನ್ನ ಸುತನಲ್ಲೆನುತೆ ಪಾರ್ಥ ತೆಗೆದೆಚ್ಚನು ॥೮॥

ಪಾರ್ಥಿವರ ಪಂತಮಲ್ಲೆಂದು ಪೇಳಲ್ಕೆ ಪುರ ।
ಷಾರ್ಥಮಂ ಮಾಳ್ಪೆಲಾ ನಿನ್ನ ಪೌರುಷವನಪ ।
ಕೀರ್ತಿಗಂಜುವನಲ್ಲ ಪಿಶನಂ ಪಚಾರಿಸುವೆ ಮತ್ತೆ ಕಾಳೆಗಕೆ ಬಂದು ॥
ಧೂರ್ತನುಹೆ ನೀನೆನುತೆ ನಸುನಗೆಯೊಳಿದಿರಾಗಿ ।
ಪಾರ್ಥನ ಕುಮಾರನಂ ಘಾತಿಸಿದನೊಂಬತ್ತು ।
ಕಾರ್ತಸ್ವರಾಂಕಿತಸುಪುಂಖದಿಂದೆಸೆವ ಬಾಣಂಗಳಿಂದನುಸಾಲ್ವನು ॥೯॥

ಕೈತವಕದಿಸುಗೆಯೋ ನಿನ್ನ ಸಾಹಸವಿನಿತೂ ।
ಮೈತಲೆಗಲಸಿ ಬಂದುದಾಹವಕೆ ಪೊಸತೆನುತೆ ।
ಕೈತವಕದಿಂದೆಚ್ಚನನುಸಾಲ್ವನಂ ನೂರುಬಾಣದಿಂ ಪಾರ್ಥಸೂನು ॥
ಐತಂಲವಂ ಮಧ್ಯ ಮಾರ್ಗದೊಳ್ತಡೆಗಡಿದು ।
ದೈತೇಯರಾಜಂ ಕನಲ್ದಾಗ ಬರಸಿಡಿಲ ।
ಹೊಯ್ತಿಗಿಮ್ಮಡಿಯಾದ ಕಣೆಗಳಂ ಕವಿಸಿದಂ ಬಭ್ರುವಾಹನನ ಮೇಲೆ ॥೧೦॥

ಉಬ್ಬಿದುದು ಮೈ ರೋಷದಿಂದೆ ಗಂಟಿಕ್ಕಿದುವು ।
ಪುಬ್ಬುಗಳ್ಬಭ್ರುವಾಹಂಗೆ ತೆಗೆತೆಗೆದಿಸುತೆ ।
ಬೊಬ್ಬಿರಿದನನುಸಾಲ್ವನಂ ಮುಸುಕಿದವು ಕೋಟಿಸಂಖ್ಯೆಯ ಪೊಗರ್ಗಣೆಗಳು ॥
ಅಬ್ಬರಸಿ ದೈತ್ಯನದಕ್ಕಿಮ್ಮಡಿಸಿ ಕೋಲ್ಗರೆದ್ಯ ।
ನೊಬ್ಬೊಬ್ಬರಂ ಜಯಿಸುವಾತುರದೊಳೆಚ್ಚಾಡ ।
ಲಿಬ್ಬರಂಗದೊಳಿಡಿದುವಂಬುಗಳ್ಪರಿದುವರುಣಾಂಬುಗಳ್ಸಂಗರದೊಳು ॥೧೧॥

ಬಾಣದೊಳ್ಬಣಿಕೆಯೋಳ್ಬಿಲ್ಗಾರತನದ ಬಿ ।
ನ್ನಾಣದೊಳ್ಬಿಂಕದೊಳ್ತಾಳಿಕೆಯೊಳುರುತರ ।
ತ್ರಾಣದೊಳ್ಜಯದೋಳ್ಚಮತ್ಕೃತಿಯೊಳದಟನೊಳ್ವೀರದೊಳ್ಪಾರಣೆಯೊಳು ॥

ಪಾಣಿಲಾಘವದೊಳ್ಪರಾಕ್ರಮದ ಪಂತದೊ ।
ಳ್ಕಾಣೆನವರಿರ್ವರ್ಗೆ ಸಮರಾದ ಕಲಿಗಳಂ ।
ಕ್ಷೋಣಿಯೊಳೆನಲ್ಬಭ್ರುವಾಹಾನುಸಾಲ್ವರೆಚ್ಚಾಡಿದರ್ ಸಂಗರದೊಳು ॥೧೨॥

ಕಾಳೆಗಂ ಸಮನಾಗಿ ಬರೆ ಕೆರಳ್ದನುಸಾಲ್ವ ।
ನೇಳಂಬಿನಿಂ ಪಾರ್ಥಸುತನ ಬತ್ತಳಿಕೆಯಂ ।
ಕೋಲೆಂಟರಿಂದೆ ಟಿಕ್ಕೆಯವನೀರೇಳುಮಾರ್ಗಣದಿಂದೆ ಕಾರ್ಮುಕವನು ॥
ಬೀಳಲಿಕ್ಕಡಿಯಾಗಿ ಕತ್ತರಿಸಿ ಕವಚಮಂ ।
ಸೀಳಿದಂ ಕೈಯೊಡನೆ ಸಾಸಿರಸರಲ್ಗಳಿಂ ।
ಪೂಳಿದಂ ತುರಗಸಾರಥಿವರೂಥಂಗಳಂ ಶಿಲಿಮುಖವ್ರಾತದಿಂದೆ ॥೧೩॥

ಕ್ಷಣದೊಳಾಗಳೆ ಬಭ್ರುವಾಹನಂ ಮತ್ತೊಂದು ।
ಮಣಿವರೂಥವನಡರ್ದ್ದಿಸುತಿರ್ದ್ದನಿತ್ತಲುರ ।
ವಣಿಸುವನುಸಾಲ್ವಂ ವಿರಥನಾಗಿ ಕೊಂಡನುರುಗದೆಯನೀಪಾರ್ಥಸುತನ ॥
ರಣಚಮತ್ಕಾರಮೆಂತುಟೊ ತನ್ನ ಮೇಲಕಿ
ಟ್ಟಣಿಸಿ ಬಹ ದಾನವನನೆಚ್ಚೊಡುಚ್ಚಳಿಸಿ ಕೂ ।
ಗ್ಗಣೆಗಳಡಗಿದುವಿಳೆಯೊಳಸುರೇಂದ್ರನಸವಳಿದು ವಸುಧೆಯಂ ಪಸಗೈದನು ॥೧೪॥

ಅನುಸಾಲ್ವನಳವಳಿಯೆ ಚಾಪಮಂ ಜೇಗೈದು ।
ದನುಜಾರಿತನಯನಿದಿರಾಗಿ ನಿಲ್ಲಲವೂ ತ ।
ನ್ನನೆ ಮೊದಲೆ ವಂದಿಸದೆ ಪಾರ್ಥನಂ ಕಂಡ ಕೆಡಿಸದೆ ರಾಜಕಾರಿಯವನು ॥
ತನುವಸುರೆ ನೋಯಿಸೆವು ಮೈದುನನಲಾ ಸರಸ ।
ಕನುವರದೊಳೆಚ್ಚಾಡಿ†ನೋಡುವೆವು ಕಂಗೆಡದಿ ।
ರೆನುತ ನಾಲ್ಕೈದುಬಾಣಂಗಳಂ ಬೀರಿದಂ ಬಭ್ರುವಾಹನನ ಮೇಲೆ ॥೧೫॥

ಸರಸಭಾವದೊಳೆ ಭಾವಿಸೆ ಭಾವನವರಿಗಿದು ।
ವಿರಸವಾಗದೆ ಮಾಣದೀಗ ಸಂಗ್ರಾಮದೊಳ್ ।
ಸರಸಕಾರ್ಮುಕಮಿಲ್ಲ ಸರಸಶಿಂಜಿನಿಯಿಲ್ಲ ಸರಸಬಾಣಂಗಳಿಲ್ಲ ॥
ಸರಸಯುವತಿಯ ಕಟಾಕ್ಷದ ನೆಮ್ಮುಗೆಗಳಿಲ್ಲ ।
ಪರುಷವಾಗದೆ ನೋಡು ರಣವೆನುತೆ ಪತ್ತು ಸಾ ।
ಸಿರಕೋಲ್ಗಳಂ ಮುಸುಕಿ ಹರಿತನಯನಂ ದಿಟಕನಂಗನೆನಿಸಿದನಾರ್ಜುನಿ ॥೧೬॥

† ನೋಡುವಂ— ಪಾಠಾಂತರ.

ಮುಸುಕಿದಸರಲ್ಗಳಂ ಕುಸುರಿದರಿದಂ ಕೂಡೆ ।
ದೆಸೆಗಳೇನಾದುವಾಗಸವೆತ್ತಲಡಗಿದುದು ।
ವಸುಮತಿಯುದೆಲ್ಲಿಹುದು ಶಶಿರವಿಗಳೆಡೆಯಾಟದೆಸಕಂಗಳಾವೆಡೆಯೊಳು ॥
ಅಸುರರೊಳ್ನಿರ್ಜರಪ್ರಸರದೊಳ್ಮನುಜರೊ ।
ಳ್ಪೆಸರುಳ್ಳವರ ಸಮರದಿಸುಗೆಯೊಳ್ಕಾಣೆನಿದು ।
ಪೊಸತೆಂಬತೆರನಾಗೆ ವಿಶಿಖಮಂ ಕೆದರಿದಂ ಬಿಸರುಹಾಕ್ಷನ ತನಯನು ॥೧೭॥

ಕರ್ಕಶದೊಳಿಸುವ ಕೃಷ್ಣಾತ್ಮಜನ ಬಾಣ ಸಂ ।
ಪರ್ಕದಿಂದಾದ ಕತ್ತಲೆಯಂ ಕೆಡಿಸಿದುವವು ।
ರರ್ಕಳಹದೆನೆ ಸವ್ಯಸಾಚಿಯ ತನುಜನ ಪೊಸಮಸೆಯ ವಿಶಿಖಪ್ರಭೆಗಳು ॥
ಅರ್ಕರಶ್ಮಿಗಳಂಧಕಾರಂಗಳಡಿಗಡಿಗೆ ।
ತರ್ಕಮಂ ಮಾಳ್ಪಂತೆ ಕಂಗೊಳಿಸಲಾಗ ವೀ ।
ರರ್ಕಳೆಚ್ಚಾಡಿದರ್ಬಭ್ರುವಾಹನರುಕ್ಮಿಣೀಸುತರ್ ಸಂಗರದೊಳು ॥೧೮॥

ಆಚ್ಚರಿಯನಿನ್ನು ಜನಮೇಜಯನರೇಂದ್ರ ಕೇ ।
ಳಚ್ಯುತನ ಸುತನ ಬಾಣಂಗಳಂ ನಡುವೆ ಮುರಿ ।
ಯೆಚ್ಚನಾತನ ಮಣಿವರೂಥಭೈತ್ರವನಂಬಿನಂಬುಧಿಯ ವೀಚಿಯಿಂದೆ ॥
ಮುಚ್ಚಿದಂ ಕೂಡೆ ಸ್ಮರನಂಗದೊಳ್ಗಣೆಗಳಂ ।
ಪೊಚ್ಚಿದಂ ಕೆಲಬಲದೊಳಿಡಿದ ರಿಪುಸೇನೆಯಂ ।
ಕೊಚ್ಚಿದಂ ಕೊಂದನಗಣಿತಬಲವನಾಬಭ್ರುವಾಹನಂ ಕೊಳುಗುಳದೊಳು ॥೧೯॥

ಕಂಡುರೆ ಕನಲ್ದಾತನಿಸುವಿಸುವ ಕೋಲ್ಗಳಂ ।
ಖಂಡಿಸುತೆ ಮಿಡುಕದಂತವನ ತೇರೊಡನೊಡನೆ ।
ಚಂಡಶರಜಾಲಮಂ ಸೈಗರೆಯುತುಚ್ಚಳಿಸಿ ಮತ್ತೆ ರಿಪುಬಲದ ಮೇಲೆ ॥
ಹಿಂಡುಗಣೆಯಂ ಕವಿಸಿ ಮುಂದಿಯಂ ಕೊಲುತಿರ್ದ ।
ನಂಡಲೆದು ಮೂಜಗವನೈದೆ* ಕುಸುಮಾಸ್ತ್ರದಿಂ ।
ದಿಂಡುರುಳ್ಚುವ ಶಂಬರಾರಿಗಿದಿರಾರೆನೆಲ್ಪುಂಡರೀಕಾಕ್ಷಸೂನು ॥೨೦॥

ಕಡಿಯು ರಾವುತರ ತಲೆ ನೆಲಕುದುರೆ ಕುದುರೆಗಳ್ ।
ಮಡಿಯೆ ಜೋದರ್ಕೆಡೆಯಲಾಲನೆಗಳ್ ನೆಗಳ್ದರಣ ।
ದೆಡೆಯೊಳ್ಪೊರಳೆ ಶಿರಂ ಪರಿಯಲ್ಕೆ ಸಾರಥಿಯ ರಥಿಯ ತನು ಸೀಳ್ಗಳಾಗೆ ॥

* ಐದೆ =೧. ಚೆನ್ನಾಗಿ, ೨, ಐದು ಮಾತ್ರವೇ ಆದ.

ಕಡುಪಾಂತಕಾಲಾಗ್ನಿಳೊಡಲಳಿಯೆ ಲಳಿಯೆದ್ದು ।
ಪಡೆಯನುರಿ ಕೊಂದುವು ಶರಧಿಭವನಭವನ ಪೊಗ ।
ರಿಡಿದಂಬುಗಳ್ಪ್ರಳಯಶತಕೋಟಿ ಕೋಟಿಯಂ ಪೋಲ್ತುದಾ ಸಂಗರದೊಳು ‖೨೧‖

ಧರಣಿತಳದಂತೆ ನವಖಂಡಮಯವಾಗಿ ಯಮ ।
ಪುರದಂತೆ ಬಹನರಕಪಾಲಮಯವಾಗಿ ಸಾ ।
ಗರದಂತೆ ಭೂರಿಜೀವನಭಂಗಮಯವಾಗಿ ಸಂಸಾರಚಕ್ರದಂತೆ ॥
ಭರಿತಪಾತಕಬಂಧುಮಯವಾಗಿ ಕೈಲಾಸ ।
ಗಿರಿಯಂತೆ ಶಿವಗಣವಿಲಾಸಮಯವಾಗಿ ವಿ ।
ಸ್ತರವ ನೈಮಿಶದಂತೆ ಪ್ರಾವೃತವಿರಕ್ತಮಯವಾಗಿ ರಣಮೆಸೆದಿರ್ದುದು ‖೨೨‖

ಪೆಣಮಯಂ ಮೀರಿ ಮೆದೆಗೆಡೆದಿರ್ದ್ದ ವಾಜಿಪಾ ।
ರಣಮಯಂ ಬಿಡದೆ ಕುಣಿದಾಡುವಟ್ಟೆಗಳ ರಿಂ ।
ಗಣಮಯಂ ನಿಡುಗರುಳ್ಖಂಡಮಿದುಳಡಗುಸುಂಟಿಗೆಮಜ್ಜೆಮಾಂಸಂಗಳ ॥
ನೆಣಮಯಂ ಪರಿವ ನೆತ್ತರ ಬಸೆವ ಜಿಗಿಯ ದಾ।
ರುಣಮಯಂ ಯಕ್ಷರಾಕ್ಷಸಭೂತಭೇತಾಳ ।
ಗಣಮಯಂ ಸಲೆ ಭಯಂಕರಮಾದುದಂದು ರಣರಂಗಮಾಪ್ರದ್ಯುಮ್ನನ ‖೨೩‖

ಅರಿದ ಸುಂಡಿಲ ಕಹಳೆವಿಡಿದೂದಿದುವು ಕೆಲವು ।
ಕರಿಯ ರದನಂಗಳ್ಗೆ ತಲೆಯೋಡ ಸೊರೆಗಟ್ಟಿ ।
ನರದ* ತಂತ್ರಿಯ ಪೂಡಿ ದಂಡಿಗೆವಿಡಿದು ಪಾಡಿದುವು ಕೆಲವು ತುರಗಂಗಳ ॥
ಖುರಮಂ ಪಿಡಿದು ತಾಳವಿಕ್ಕಿದುವು ಕೆಲವು ಕುಂ ॥
ಜರಶಿರದ ಮುರಜಂಗಳಂ ಬಾರಿಸಿದುವು ಕೆಲ ।
ವಿರದೆ ಕುಣಿದಾಡಿದುವು ಮರುಳ್ಗಳಾರಣರಂಗದೊಳ್ನಾಟ್ಯರಚನೆ ಮೆರೆಯೆ ‖೨೪‖

ಹರಿಸುತಂ ತನ್ನ ಮೋಹರವನಿಂತೈದೆ ಸಂ ।
ಹರಿಸುತಂತಕನೊಲಿರೆ ಕಾಣುತೆ ವರೂಥಮಂ ।
ಹರಿಸುತಂತಾ ಬಭ್ರುವಾಹನಂ ಖಾತಿಯಂ ಕೈಕೊಂಡು ಕಣೆಗರೆಯುತೆ ॥
ಪರದಳವನೊಳವೊಕ್ಕು ಸುಭಟರಂ ಸದೆದು ಸೊ ।
ಪ್ಪರೆದಳವಳಿಸಲಾಗ ಭೀತಿಯಿಂ ದೆಸೆದೆಸೆಗೆ ।
ಪರೆದಳವಡಿಸಿದರ್ಪಲಾಯನವನತಿಬಲಪಾರ್ಥನ ಪತಾಕಿನಿಯೊಳು ‖೨೫‖

* ಜಂತ್ರಂ— ಪಾಠಾಂತರ.

ಕೆಡೆದ ಕರಿಗಳ ಬೆಟ್ಟವಳಿಯ ಗುಂಡಗುಳೊಳಗೆ ।
ಮಡಿದ ಕುದುರೆಗಳ ಪೊಡೆಗಲ್ಲ ಪೊರಳಿಗಳೊಳಗೆ ।
ಕಡಿದ ಕೈಕಾಲ ನರರಟ್ಟೆಗಳ ತುಂಪುಗಳ ಮರಮಟ್ಟಿಗಳನೆಳೆಯುತೆ ॥
ಒಡೆದ ತಲೆಯೋಡದೋಣಿಗಳಿಂದೆ ತಡಿಗೈದು ।
ತಿಡಿದನೆಣವಸೆಮಿದುಳ್ಗಳ ಕರ್ದಮಂಗಳಿಂ ।
ಬಿಡದೆ ರುಧಿರಪ್ರವಾಹಂ ಪರಿಯೆ ಸವರಿದಂ ಪಾರ್ಥಜಂ ಪರಬಲವನು ॥೨೬॥

ಶಕ್ರತನಯನ ಸಂಭವಂ ಬಳಿಕ ರೋಷದಿಂ ।
ಚಕ್ರಾಯುಧನ ಸುತನ ಸೂತನಂ ಕುದುರೆಯಂ ।
ನಕ್ರಧ್ವಜವನತುಲಚಾಪಮಂ ಕತ್ತರಿಸಿ ವಿರಥನಂ ಮಾಡೆ* ಕೂಡೆ ॥
ವಿಕ್ರಮದೊಳಾಗ ಮತ್ತೊಂದು ಮಣಿರಥದಿಂದು ।
ಪಕ್ರಮಿಸಿದಂ ಕಾಳೆಗಕೆ ಕೃಷ್ಣನಂದನನ ।
ತಿಕ್ರಮಿಸಿ ಮಗುಳಾವರೂಥಮಂ ತಡಗಡಿದನಾಪಾರ್ಥಿ ಕೊಂಗುಳದೊಳು ॥೨೭॥

ಪೊಸರಥವನಳವಡಿಸಿ ತಂದು ಹರಿಸೂನು ಬಂ ।
ದಿಸುವನಾತೇರನೊಡನೊಡನೆ ಪಾರ್ಥನ ಸುತಂ ।
ಕುಸುರಿದರಿವಂ ಧುರದೊಳಿಂತು ಬಯಲಾದುದು ವರೂಥಮೆಪ್ಪತ್ತು ಬಳಿಕ ।
ಅಸವಳಿದನಾಬಭ್ರುವಾಹನನ ಬಾಣದಿಂ ।
ದಸುರಾರಿನಂದನಂ ಕೂಡೆ ಸಂತೈಸಿಕೊಂ ।
ಡಸಮಬಲನೋಳ್ಪೆಳಂಚಿದನಾಗಳಿರ್ವರ್ಗ್ಗೆ ಮಸೆದುದಂಕಂ ಖತಿಯೊಳು ॥೨೮॥

‡ [ಎದ್ದು ನಭದೊಳ್ಪಳಂಚುವರೊಮ್ಮೆ ಭೂತಳದೊ ।
ಳೆದ್ದು ಹೆಣಗುವರೊಮ್ಮೆ ಬಳಸಿ ಮಂಡಲದಿಂದೆ ।
ಹೊದ್ದಿ ಹೋರುರೊಮ್ಮೆ ತಗುಳುಮಗುಳಾಗಿ ತಾಗುವರೊಮ್ಮೆ ಸರಿಬರಿಯೊಳು ॥
ತಿದ್ದಿ ತುಡಕುವರೊಮ್ಮೆ ಬಾಣಾಂಬುಧಿಯ ತೆರೆಯೊ ।
ಳದ್ದಿ ಪೊಣರುವರೊಮ್ಮೆ ಮೂರ್ಛೆಯಿಂ ಮೈಮರೆದು ।
ಬಿದ್ದು ಚೇತರಿಸಿ ಕಾದುವರೊಮ್ಮೆ ಕೃಷ್ಣಪಾರ್ಥರ ತನಯರಾಹವದೊಳು ॥೨೯॥

* ಮಾಡುತಿರಲ— ಪಾಠಾಂತರ.

‡ ಸೂ. ೨೯ನೆಯ ಪದ್ಯವನ್ನು ಪರೀಕ್ಷೆಗೆ ಸೇರಿಸಿಲ್ಲ.

[೧]ಧೃತಚಾಪಚಾಪಲರ್ಶಸ್ತ್ರಾಸ್ತ್ರನಿಪುಣರು ।
ನ್ನತಸತ್ವಸತ್ವರದುರ್ಸ್ಸಹರಜೇಯರ ।
ಪ್ರತಿಸಮರಸಮರಥಸಾರ್ಹಸಿಗಳಿರ್ವರುಂ ಗಗನಗಮನದ ವೀರರು ॥
[೨]ಧೃತಿಮಾನಮಾನಸರ್ಕುಪಿತಮುಖಕರ್ಕಶ ।
ವಿರ್ತತರಣತ ಣಕರ್ಚಂಡಭುಜಬಲಯುತ ।
[೩]ಕೃರ್ತಕಾರ್ಷ್ಣಿಕಾರ್ಷ್ಣಿಗಳ್ಕಡುಗಿಂದೆಕಾದಿದರ್ಬೇಸರದೆ ಸಂಗರದೊಳು ॥೩೦॥

ಏಳುವರ್ಬೀಳುವರ್ಮೂದಲೆಯ ನುಡಿಗಳಂ ।
ಪೇಳುವರ್ಕೇಳುವರ್ನಾಂಟಿದ ಶರಂಗಳಂ ।
ಕೀಳುವರ್ತಾಳುವರ್ಗಾಯಮಂ ವಿಕ್ರಮಾಗ್ನಿಗೆ ಪಡೆಯೊಡಲ ಹವಿಯನು ॥
ಬೀಳುವರ್ಬಾಳುವರ್ವೀರಸಿರಿಯಂ ತಳೆದು ।
ಸೀಳುವರ್ತೂಳುವರ್ಕಣೆಯಿಂದರುಣಜಲದೊ ।
ಳಾಳುವರ್ಪೂಳುವರ್ಕೋರ್ಗ್ಳಿಂದಹಿತರಂ ಪ್ರದ್ಯುಮ್ನಪಾರ್ಥಸುತರು ॥೩೧॥

ಇಂತೊರ್ವರೊರ್ವರ್ಗೆ ಸೋಲದೆ ಸುಪರ್ಣಹನು ।
ಮಂತರ ಕದನದಂತೆ ಧರೆಯೊಳ್ಪೊಣರ್ದು ಮೇ ।
ಣಂತರಿಕ್ಷವನಡರ್ದ್ದರೆ ಪೆಣಗಿದರ್ಬಳಿಕ ರೌಕ್ಮಿಣೇಯನ ಚಾಪವ ॥
ತಂತುವಂ ಕತ್ತರಿಸಲಾರ್ಜುನಿಯ ಮೇಲೆ ಗದೆ ।
ಯಂ ತೆಗೆದಿಡಲ್ಕವನದಂ ನಡುವೆ ಕಡಿಗೆಯ್ಯ ।
ಲೆಂತೊದಗಿದನೋ ಮತ್ತೆ ಬಿಲ್ವಿಡಿದು ಹರಿಸೂನು ಪಾರ್ಥಿಯಂ ತೆಗೆದೆಚ್ಚನು॥೩೨॥

ಪೊಡವಿಗಧಿನಾಥ ಕೇಳ್ಬಳಿಕಿರ್ವರುಂ ಗಗನ ।
ಕಡರಿ ನಿಜಸತ್ವದಿಂದನ್ಯೋನ್ಯಮಾರ್ದಿಸಲ್ ।
ಸಿಡಿಲ ರಭಸದೊಳುಂಗಳ್ತಾಗಲುಭಯವೀರರ್ಕ್ರೋಧಸಮಾತ್ರಕಾಗಿ ॥
ಸಿಡಿದಂತರಿಕ್ಷದಿಂ ಧಾರಿಣೀತಳಕೆ ಪೊಡೆ ।
ಗೆಡೆದರಾಕ್ಷಣದೊಳ್ಪುರಂದರನ ವಜ್ರದಿಂ ।
ಕಡಿವಡೆದು ಮೇದಿನಿಗೆ ಬೀಳ್ವ ಕುಲಗಿರಿಗಳಂತೊಬ್ಬೊಬ್ಬರೊಂದು ಕಡೆಗೆ ॥೩೩॥

ಸಾಹಾಸವ ದೆಂತೊ ಭೂತಳಕೆ ಬೀಳುತೆ ಬಭ್ರು ।
ವಾಹನಂ ತರಹರಿಸುತೆಚ್ಚರಿಕೆಗುಂದದೆ ಮ ।
ಹಾಹವಕೆ ಬೇರೊಂದು ಮಣಿವರೂಥವನಡರ್ದ್ದಾಗ ತನ್ನಭಿಮುಖದೊಳು ॥

೧. ಕೃತ; ೨ ದ್ಯುತಿ; ೩. ನುತ:—ಪಾಠಾಂತರ.

ಆಹರಿಕುಮಾರನಂ ಕಾಣದೆ ಧನಂಜಯನ ।
ಮೋಹ೯ವನೈದಿದಂ ಪಸಿದ ಪೆರ್ಬುಲಿ ಮೃಗಸ ।
ಮೂಹಮಂ ಪುಗುವಂತೆ ಕಾಡಾನೆ ಕದಳಿಗಳ ತರುಗಳಂ ತುಡುಕುವಂತೆ ॥೨೬॥

ಕವಿದರಂತರ್ನಿರಂದರುರುಬಿದರ್ತರುಬಿದ ।
ತಿರ್ವಿದರೆಚ್ಚಪೋಯ್ದ ರೊತ್ತಿದರ್ಮುತ್ತಿದ ।
ರ್ವಿವಿಧಾಯುಧಂಗಳಂ ಬೀರಿದರ್ಮೀರಿದರ್ವಿಗ್ರಹಾವೇಶದಿಂದೆ ॥
ತನೆ ತಾಗಿದರ್ತಡೆದರಡರಿದರ್ತೊಡರಿದ ।
ರ್ತವಕದಿಂ ತಮತಮಗೆ ಕಾದಿದರ್ಮೋದಿದ ।
ರ್ಬವರದೊಳ್ಪ್ರಥ್ವಿಯಂ ಬಳಸಿದರ್ಸೆಳಸಿರ್ನರನ ಸೇನೆಯ ಸುಭಟರು ॥೨೭॥

ಒತ್ತರಿಸಿ ಫಲುಗುಣನ ಸೂನುವಂ ಭಾನುವಂ ।
ಮುತ್ತಿದುದು ಚಾತುರಂಗಾಳಿಯಿಂ ಧೂಳಿಯಿಂ ।
ಬಿತ್ತರದ ಮಣಿಪುರಸ್ವಾಮಿಯಂ ಭೂಮಿಯಂ ಸಲೆ ಮಸುಕಿತಾಕ್ಷಣದೊಳು॥
ಮೊತ್ತದ ಶರಾವಳಿಯ ಸೋನೆಯಿಂ ಸೇನೆಯಿಂ ।
ಮತ್ತೆ ಚಿತ್ರಾಂಗದೆಯ ಜಾತನಂ ಧಾತನಂ ।
ಹತ್ತಿ ಹರಿಸುದು ಬಲಮಶೇಷಮುಂ ಘೋಷಮುಂ ಘೋರತರಸಂಗರದೊಳು॥೨೮॥

೧ಪುಬಲದ ಮುತ್ತಿಗೆಯ ಕೋಲಾಹಲಂಗಳಂ ।
ವಿಪುಲಶಸ್ತ್ರಾಸ್ತ್ರಪ್ರಯೋಗಂಗಳುರುಬೆಯಂ ।
ಸಪದಿಪ್ರಹಾರದಾಯುಧಸಮೂಹಂಗಳಂ ಕಂಡು ಫಲುಗುಣನ ಸೂನು ॥
ಕುಪಿತಬದ್ಧಭ್ರುಕುಟಿಮುಖನಾಗಿ ವಹಿಲದಿಂ ।
ದ್ವಿಪಹಯವರೂಥಪತ್ತಿಗಳೆನಿತು ಕವಿದುವನಿ ।
ತಪರಿಮಿತಬಾಣಮುಂ ಸುರಿದನರಿದಂ ಪೊರೆದನಂತಕಪುರದ ಸಿರಿಯನು ॥೨೭॥

ಅರಸ ಕೇಳಾಶ್ಚರ್ಯಮಂ ಬಳಿಕ ಪಾರ್ಥಜನ ।
ಶರವರ್ಷದೊಳ್ಮನೆಯದವರಿಲ್ಲ ಪಾಂಡವನ ।
ಪರಿವಾರದೊಳ್ಕರಿತುರಗರಥದ ಪಾಳೆಯದೊಳಿರ್ದ್ದ ಜನಜಂಗುಳಿಯೊಳು ॥
ಅರರೆ ಬಿಲ್ಗಾರತನದೇಳ್ಗೆ ಯೆಂತುಟೋ ಜಗ ।
ದ್ಭರಿತನಾಗಿಹ ವಿಷ್ಣುಮಾಯಾಪ್ರಭಾವದಂ ।
ತಿರೆ ಬಭ್ರುವಾಹನನ ಬಾಣಂಗಳೆಲ್ಲರಂ ಮುಸುಕಿ ಮೋಹಿಸುತಿರ್ದುವು ॥೩೦॥

೧. ಯುಂ—ಪಾಠಾಂತರ.

ರಂಭಾದಿಗಳ ಕುಚದ ಕುಂಕುಮದೊಳಾಳ್ದ ಹಾ ।
ರಂ ಭಾರಿಯಂಕದೊಳ್ಮಡಿದ ವೀರಾಂಗಪರಿ ।
ರಂಭಾತಿಶಯದ ಸಮ್ಮರ್ದನದೊಳಾತನಂ ಪರಿದು ಸೂಸುವ ತೆರದೊಳು ॥
ಕುಂಭಿಕುಂಕದ ಸುಮುಕ್ತಾಫಲಂಗಳ್ ಶಾತ ।
ಕುಂಭಚಿತ್ರಿತಮಾರ್ಗಣದ ರುಚಿಗಳೊಡನೆ ರಣ ।
ಕುಂಭಿನಿಗೆ ಬೀಳುತಿರ್ದುವು ಬಭ್ರುವಾಹನನ ತೀವ್ರತರದಿಸುಗೆಯಿಂದೆ ॥೩೯॥

ಮುರಿದುವಗಣಿತರಥದ ರಾಜಿಗಳ್ ತೇಜಿಗಳ್ ।
ತೊರೆದುವಸುವಂ ಮಡಿದುವಾನೆಗಳ್ ಸೇನೆಗಳ್ ।
ಕುರಿಜರಿವೊಲಾದರರಿವೀರರೊಳ್ಧೀರರೊಳ್ ಪಾರ್ಥನಂದನನ ಮುಂದೆ ॥
ಇರಿದು ಮೆರೆಯಲ್ಕಾಣೆನೊರ್ವರಂ ಸರ್ವರಂ ।
ನೆರೆ ಗೆಲ್ದನತುಳಮಾರ್ಗಣದಿಂದೆ ರಣದಿಂದೆ ।
ಪೆರೆದೆಗೆದು ಕಂಡಕಡೆಗೋಡಿದರ್ ನೋಡಿದರ್ ಜೀವಮುಳಿವಂ ಸುಭಟರು ॥೪೦॥

ತಾಗಿ ಬಂದುಗಗೊಂಡನನುಸಾಲ್ವನಂಗೈಸಿ ।
ಬೀಗಿದಂ ಕರ್ಣಜಂ ಹಂಸಧ್ವಜಂ ಕೆಣಕಿ ।
ನೀಗಿದಂ ಮಾನಮಂ ಯೌವನಾಶ್ವಂತಡೆದು ಸೋಲ್ದಂ ಸುವೇಗನಾಂತು ॥
ಸೋಗಿದಂ ಧುರದಿಂದೆ ಸಿತಕೇತು ಸೆಣಸಿ ತಲೆ ।
ದೂಗಿದಂ ಪರಿಭವಕ್ಕದೆರುದ್ಧನಿರದಿಳೆಗೆ ।
ಬಾಗಿದಂ ಮೈಮರೆದು ಕೃತವರ್ಮಸಾತ್ಯಕಿಗಳಿದಿರಾಗಿ ದೆಸೆಗೆಟ್ಟರು ॥೪೧॥

ಏನೆಂಬೆನಾರಣವಸಂತದೊಳ್ಕೆರೆದಜಯ ।
ಮಾನಿನಿ ವಿಮುಖವಾದ ವಿರಹದಿಂ ತಪಿಸುವ ಭ ।
ಟಾನೀಕಮಂ ಬೆದರಿಸದೆ ಮಾಣದಿಂಬಿನಂ ಪಾರ್ಥಿಯ ಶಿಲೀಮುಖಾಳಿ ॥
ದಾನಮಾತಂಗಘಟೆಗೆರಗಿದುದು ಸ್ಯಂದನವಿ ।
ತಾನವಂ ಡೋರುಗಳೆಹುದು ಗರಿಯ ಗಾಳಿಯಂ ।
ಬಾನೆಡೆಗೆ ತೀಡಿದುದು ಶತಪತ್ರದಳದ ಮೇಲ್ಸೈದಿ ವಿಸಟಂಬರಿದುದು ॥೪೨॥

ಜೋದರಾಹುತರಥಿಕರಳಿದಾನೆಕುದುರೆತೇ ।
ರ್ಪೋದುವೆಣ್ದೆಸೆಗೆ ತಮ್ಮಿಚ್ಚೆಯಿಂ ಪಟ್ಟಣದ ।
ಬೀದಿಗರ್ಳೊಡಿದರ್ಲಾಯದೊಳ್ಸೂರೆಗೊಂಡಭೂರ್ಷಣಾದಿಗಳನು ॥

ಕಾಣುವ ಕಲಿಗಳಿಲ್ಲ ಪಸಯೊಳ್ಪಲಾಯನವ ।
ನಾದರಿಸಿದರ್ಭಟಪ್ರದ್ಯುಮ್ನ ಮೊದಲಾದ ।
ರಾದಿಯೊಳ್ಬಿದ್ದು ಮೋಹಿತರಾದರಾ ಬಭ್ರುವಾಹನನ ಕೋಲ್ಗಳಿಂದೆ ॥೪೩॥

ಪತೆ ಪಡಪುಗೆಟ್ಟು ದೆಸೆದೆಸೆಗೋಡುತಿರ್ಪುದಂ ।
ತಡೆತವೆದು ಕಡುಗಲಿಗಳಡಗೆಡಹುತಿರ್ಪುದಂ ।
ಹೊಡೆಹೊಡೆದು ಪುರಕಾನೆಕುದ ರೆಯುಂ ಕೂಡಿಕೊಳುತಿರ್ಪುದಂ ದೊರೆದೊರೆಗಳು ।
ನಿಡುಸಿಡ ಸರಳ್ನಾಂಟಿ ಮೂರ್ಛೆವಡೆದಿರ್ಪುದಂ ।
ನಡುನಡುಗುತತಿಬಲಕೈರ್ಮರೆಯುತಿರ್ಪುದಂ ।
ಬಿಡಬಿಡದೆ ಫಲಗುಣಂ ನೋಡಿ ಖತಿಯಿಂದೆ ಘುಡುಘುಡುಸಿ ಕಿಡಿಕಿಡಿಯಾದನುಳಳ

ಗಾಂಡೀವಮಂ ತುಡುಕಿ ಟಂಕಾರಮಂಬುಜಭ ।
ವಾಂಡಮಂ ತುಂಬವಿರದೆಂಬಿನಂ ಜೇಗೈದು ।
ತಾಂಡವದ ಮೃಡನ ಸಾರೂಪ್ಯಮಂ ಕೈಕೊಂಡು ರೋಷತಾವಾಕ್ರಾಕ್ಷನಾಗಿ ॥
ಪಾಂಡವಂ ಮಣಿರಥದೊಳೆಸೆವ ನಡುವಗಲ ಮಾ ।
ರ್ತಾಂಡಾನಂತುಜ್ವಲಿಸುತ್ತೈದಿದಂ ಕಾಳೆಗಕೆ ।
ಖಾಂಡವದಹನದಂದು ತನ್ನ ನೋಲವುರಸತಿ ಮುಳಿದು ಕನನಕೆ ಬಹವೊಲು ೪೫

ಆ ನರಂ ಕೋಪಮಂ ತಾಳ್ದು ನಿಜಚಾಪಮಂ ।
ಜ್ಯಾನಾದಮಂ ಮಾಡೆ ಹಂಸಧ್ವಜಂ ಕೂಡೆ ।
ಸೇನೆಸಹಿತುರುಬಿದಂ ಪಾರ್ಥನುಂ ತರುಬಿದಂ ಕೂರ್ಗಣೆಗಳಂ ಕರೆಯುತೆ ॥
ಬಾನೆಡೆಯೊಳೆತ್ತಲುಂ ದೆಸೆದೆಸೆಯ ಸುತ್ತಲುಮ ।
ನೂನಶರಜಾಲಮಯಮಾಗಿರ್ದುದಾ ಸಮಯ ।
ಮೇನೆಂಬೆನಚ್ಚರಿಯ ಕಾಳೆಗದ ಹೊಸಪರಿ ಸುನತಿಭಯಂಕರವಾಗಲು ॥೪೬॥

ಬಳಿಕ ಹಂಸಧ್ವಜಂಗಾ ಬಭ್ರುವಾಹನಂ ।
ಗಳವಿಯೊಳ್ಕಾಳೆಗಂ ಪೂಣ್ದುದು ಕಠೋರಮೆನೆ ।
ದಳಕೆ ದಳಮುಗ್ಗಳಿಕೆಗಗ್ಗಳಿಕೆ ಧೃತಿಗೆ ಧೃತಿಕೊಲೆಗೆ ಕೊಲೆ ಕೋಲ್ಗೆ ಕೋಲು ॥
ಮುಳಿಸಿಂಗೆ ಮುಳಿಸು ಗಾಯಕೆ ಗಾಯಮುದಟಗದ ।
ಟಳವಡಿಕೆಗಳವಡಿಕೆ ಸಮಮಾಗೆ ದೇವಪುರ ।
ನಿಳಯಲಕ್ಷ್ಮೀವರನ ಮೈದುನಂ ತಲೆದೂಗೆ ಮೆಚ್ಚಿ ಸುರರುಲಿಯೆ ಮೇಗೆ ॥೪೭॥

ಇಪ್ಪತ್ತೆರಡನೆಯ ಸಂಧಿ ಸಂಪೂರ್ಣಂ.

ಇಪ್ಪತ್ತುಮೂರನೆಯ ಸಂಧಿ.

ಸೂಚನೆ॥ ಆಹವಸಮರ್ಥಕರ್ಣಜನಂ ಕೆಡಹಿ ಬಭ್ರು ।
ವಾಹನಂ ಸುರನದಿಯ ಶಾಪದಿಂದರಿಯಲ್ಕೆ ।
ರಾಹುತುಡುಕಿರ್ದಮೃತಕರಬಿಂಬದಂತಿರ್ದುದರ್ಜುನನ ತಲೆ ರಣದೊಳು ॥

ಜನಪ ಕೇಳರ್ಜುನನ ಸೈನ್ಯದೊಳ್ಬಭ್ರುವಾ ।
ಹನನಖಿಳವೀರರಂ ಕೆಡಹಿ ಹಂಸಧ್ವಜನೊ ।
ಡನೆ ರಣದೊಳೆಚ್ಚಾಡಿ ಸ್ಯಂದನಸಹಸ್ರಮಂ ತಡೆಗಡಿದವನ ಪಡೆಯೊಳು ॥
ತನಿಗಲಿಗಳಾರುಸಾವಿರಮಂ ಪೊರಳ್ಚಿ ವಾ ।
ಹಿನಿಯಸೈದಕ್ಷೌಹಿಣಿಯನೊಕ್ಕಲಿಕ್ಕಿ ಮೇ ।
ದಿನಿಗವಂ ನೈಮರೆದು ಬೀಳ್ವಂತೆ ಸೆಕ್ಕಿದಂ ಕಾಯದೊಳ್ನಾಯಕವನು ॥೧॥

ಅಸದಳದೊಳವನ ಸುತರಿರ್ವರುಂ ಮಡಿದ ಬಳಿ ।
ಕಸುರಾರಿ ತನ್ನೊಳಾಡಿದ ಬಲ್ಮೆಯಂ ನೆನೆದು ।
ಬೆಸೆಗೆಟ್ಟು ಬಿದ್ದನಕಟೆಂದು ಹಂಸಧ್ವಜಂಗರ್ಜುನಂ ಮರುಗುತಿರಲು ॥
ಮುಸುಕಿದಂ ಪಡೆಸಹಿತ ಬಂದು ಪಾರ್ಥಿಯ ರಥವ ।
ನಸಮಭುಜಬಲಸುವೇಗಂ ಬಳಿಕ ಸಂಗರಂ ।
ಪೊಸತಾದುದಿರ್ವರ್ಗೆ ಕೊಂದನಾರ್ಜುನಿ ಮತ್ತೆ ವೀರರಿರ್ಛಾಸಿವರನು ॥೨॥

ಸಾಹಸದೊಳಿರ್ವರುಂ ಸರಿಯೆನೆ ಸುವೇಗಂ ಮು ।
ಹಾಹವದೊಳೆಚ್ಚಾಡಿ ವಿರಥನಾಗಿಯೆ ಬಭ್ರು ।
ವಾಹನನ ಬಾಣದಿಂದುರೆ ನೊಂದು ಬಿದ್ದನವನಿಗೆ ಬಳಿಕ ಪಾರ್ಥ ನರನ ॥
ಮೋಹರವನೈದಿದಂ ಪ್ರಳಯಭೈರವನ ಕೋ ।
ಲಾಹಲಮಿದೆಂಬಂತೆ ಕೊಂದನೆಲ್ಲಾ ಬಲವ ।
ದೇಹನೊಳೆಸೆವ †ಜೀವ ಪರಮರವೊಲುಳಿದಿರ್ದರಾವೃಷಧ್ವಜಪಾರ್ಥರು ॥೩॥

ರಣದೊಳಂತವರಿರ್ದರಿತ್ತ ಮುನ್ನೊಂದುಕಾ ।
ರಣಕೆ ಗುರು ಶಾಪಮಂ ಕುಡಲದಂ ಬಿಡಿಸಿ ಫಲು ।
ಗುಣನಮುಲತೀರ್ಥಯಾತ್ರಾಪ್ರಸಂಗದೊಳಂದು ತಾಂ ಪರಿಗ್ರಹಿಸಿ ನೆರೆದ ॥

---

†ಮೂಲಪಾಠ— "ಜೀವಪರರೋಲುಳಿದರಿರ್ವರೇ ಪಾರ್ಥಕರ್ಣಸುತರು"

ಫಣಿರಾಜನಂದನೆಯುಲೂಪಿ ಪಾತಾಳದಿಂ ।
ಮಣಿಪುರಕೆ ಬಂದು ಮೂರ್ಛಿತರಾಗಿ ಸಮರಧಾ ।
ರಿಣಿಯೊಳಿಹ ದೊರೆಗಳಂ ತರಿಸಿ ಮಂತ್ರೌಷಧಗಳಿಂದೆ ಪಾಲಿಸುತಿರ್ದಳು ॥೪

ನೃಪ ಕೇಳುಲೂಪಿ ಚಿತ್ರಾಂಗದೆಗೆ ಪೇಳ್ದಸುರ ।
ರಿಪುಸುತಂ ತನಯಂವೆರಸಿ ಬಳಿಕ ಪಾರ್ಥಜನ ।
ವಿಪುಲಾಸ್ತ್ರದಿಂದೆ ಮೂರ್ಛಿತನಾಗಿ ರಣದೊಳಿರಲಿರ್ವರಂ ತರಿಸಿಕೊಂಡು ॥
ಅಪಗತಶ್ರಮರಪ್ಪತೆರದಿಂದೆ ಮಂದಿರದೊ ।
ಳುಪಚರಿಸಿ ಮಣಿಮಂತ್ರ ಮೂಲಿಕಾಶತಿಗಳಿಂ ।
ತಪಿಸದಂತಾರಯ್ಯುತಿರ್ದಳರ್ಜುನನಿತ್ತ ವೃಷಕೇತೇಗಿಂತೆಂದನು ॥೫॥

ಮಗನೆ ಮಡಿದುದು ಸೈನ್ಯಮನುಸಾಲ್ವಮುಖರಾದ ।
ವಿಗಡರೇರ್ವಡೆದು ಸೈಗಡೆದರಿಳೆಯೊಳ್ತಮ್ಮ ।
ನಗರಿಗನಿರುದ್ಧಪ್ರದ್ಯುಮ್ನರಂ ಕೊಂಡೊಯ್ವರಹಿತರಿವನಂ ಜಯಿಸುವ ॥
ಬಗೆಗಾಣೆನಾದೊಡಂ ನಿಲ್ವೆನಾನಿಲ್ಲಿ ಕಾ ।
ಳೆಗಕೆ ನೀನಿರದೆ ಹಸ್ತಿನಪುರಿಗೆ ಪೋಗಿ ಪೇ ।
ಳೆಗಧರಯುಧಿಷ್ಠಿರಗೀಸ್ಥಿತಿಯನೆಂಬಿನಂ ತೋರಿತುತ್ಪಾತಂಗಳು ॥೬॥

ಪರ್ದು ಕುಳ್ಳಿರ್ದುದರ್ಜುನನ ಮಕುಟಾಗ್ರದೊಳ ।
ಡರ್ದು ಗೂಡಿಕ್ಕಿದುವು ರಥದೊಳ್ಕಪೋತಂಗ ।
ಳಿರ್ದುದು ತನುಚ್ಛಾಯೆ ತಲೆಯಿಲ್ಲದಿನಿತುಮಂ ಕಂಡು ಬೆರಗಾಗಿ ನರನು ॥
ಪ್ರೊರ್ದದಿರದಪಜಯಂ ತನಗಿನ್ನು ಧರ್ಮಜಂ ।
ನಿರ್ದೈವನಹನಲಾ ಶಿವ ಮಹಾದೇವ ಮುರ ।
ಮರ್ದನಂ ತುರಗಮೇಧವನೆಂತಂತು ಮಾಡಿಪನೊ ಕರ್ಣಸುತ ಹೇಳೆಂದನು ॥೭॥

ವಾಜಿಸಹಿತಾಂ ಪೋಗಿ ಸಕಲಪರಿಕರದಿಂದೆ ।
ತೇಜದಿಂದೊಪ್ಪುವಗ್ನಿಗಳಿಂದೆ ಭೂಸುರಸ ।
ಮಾಜದಿಂದಖಿಳಋತ್ವಿಕ್ಕುಗಳ ಬಹುವಿಧದ ಮಂತ್ರಘೋಷಂಗಳಿಂದೆ ॥
ರಾಜಿಸುವ ನ ತಯಜ್ಞ ಶಾಲೆಯೊಳ್ಬಾವರಂ ।
ಯಾಜಮಾನ್ಯದೊಳಿಸುವ ಸಿರಿಯಂ ವೃಕೋದರಸ ।
ರೋಜಾಂಬಕಾದಿ ಬಾಂಧವರೋಳಾವೃತನಾಗಿರಲ್ಕಾಣೆನಕಟೆಂದನು ॥೮॥

* ಮೂಲಪಾಠ— ಮಾಡಿಸುವ.

ಪೇಳಲೇನಹುದಿನ್ನು ಬಭ್ರುವಾಹನನೊಡನೆ ।
ಕಾಳಗಂಗುಡುವೆನಾಂ ಕುಲಕೆ ಮಗ ನೀನೆಂದು ವರ್ಜ ।
ಬಾಳುವೆಗೆಡಿಸಬೇಡ ಗಜಪುರಕೆ ಪೋಗಿ ಮುರಹರಧರ್ಮನಂದನಗ್ಗೆ ॥

ಕಾಳಾದ ರಾಜಕಾರ್ಯಸ್ಥಿತಿಯನೆಚ್ಚರಿಸು ।
ಕೇಳೆನ್ನ ಮಾತನೆಂದರ್ಜುನಂ ನುಡಿಯಲ್ಕೆ ।
ತಾಳದೆ ವೃಷಧ್ವಜಂ ಕೋಪದಿಂ ಪಾರ್ಥಂಗೆ ಕೈಮುಗಿಯುತಿಂತೆಂದನು ॥೯॥

* [ಒಳ್ಳಿತಿದು ತಾತ ನಿನ್ನಂ ಬಿಟ್ಟು ನಾಂ ಪೋಗ ।
ಲುಳ್ಳವನೆ ಗಜನಗರಿಗಕಟ ರಣದೊಳ್ಜೀವ ।
ಗಳ್ಳನಾದೊಡೆ ಮತ್ಪಿತಾಮಹಂ ಬೀಳದಿರ್ದಪನೆ ಗಗನಾಗ್ರದಿಂದೆ ॥

ಹೊಳ್ಳಿರ್ದಯ ಹೊರಬಿಗರೊಳೆಂಬುದೀ ನುಡಿಗಳಂ ।
ತಳ್ಳಂಕದಿಂದೆ ನೀನಾಹವದೊಳಿಂತೆಣಿಕೆ ।
ಗೊಳ್ಳಲೇಕಿವನ ಬಿಂಕವನೀಗ ಮುರಿವೆನೆನ್ನಂ ಕಳುಹಿ ನೋಡೆಂದನು] ॥೧೦॥

ತಂದೆಗೋಸುಗಮಾಳ್ದನವಸರಕೆ ಗೋನಿಮಿ ।
ತ್ತಂ ದೇವವಿಪ್ರಾರ್ಥಕಸುದೊರೆದೊಡಾತಂಗೆ ।
ಸಂದೇಹಮಿಲ್ಲದಾದಪುದು ಗಡ ಕೈವಲ್ಯಮಿಾಗಳಾನೆಂತು ರಣಕೆ ॥

ಹಿಂದುಗಳೆದಪೆನೇಕಪತ್ನಿಯಾಗಿಹ ಸತಿಯ ।
ಮುಂದಕೈದುವೆನೆಂತು ಭಾನುಸಂಭವನ ಸುತ ।
ನೆಂದೆನಿಸಿಕೊಂಬೆನೆಂತನೃತಮಂ ನುಡಿವನಲ್ಲಾಹವಕೆ ಕಳುಹೆಂದನು ॥೧೧॥

ಮಂದಿಸಹಿತೀಬಭ್ರುವಾಹನಂ ಬರಲಿ ನಾ ।
ನಿಂದು ರಣದೊಳ್ನಿನ್ನ ಕಣ್ಗಳ್ಗೆ ಹಬ್ಬಮಂ ।
ತಂದಲ್ಲದಿರೆನೆಂದು ವೃಷಕೇತು ಬಲ್ಪಿಂ ಧನಂಜಯಮಂ ಗೆಲಗಿ ಬಳಿಕ ॥

ಪೊಂದೇರ್ಗಡರ್ದು ನಿಜಚಾಪಮಂ ತುಡುಕಿ ನರ ।
ನಂದನನ ಸಮ್ಮುಖಕೆ ನಡೆತಂದು ನುಡಿದನೆಲೆ ।
ಮಂದಮತಿ ಪಾರ್ಥಸುತನಹೊಡೆ ನಿಲ್ ಕರ್ಣಜಂ ತಾನೆನುತ ತೆಗೆದೆಚ್ಚನು ॥೧೨॥

ಲೇಸನಾಡಿದೆ ಕರ್ಣಸುತನಾದೊಡೊಳ್ಳಿತೈ ।
ವಾಸಿಯುಳ್ಳವನಪ್ಪೆ ಫಲುಗುಣಂ ಕೊಂದನ ।
ಲ್ಲಾ ಸಮರದೊಳ್ನಿನ್ನ ತಾತನಂ ತನಗೆ ನೀನೆದಿರಪ್ಪುದುಚಿತಮೆನುತೆ ॥

* ೧೦ ನೆಯ ಪದ್ಯವನ್ನು ಪರೀಕ್ಷೆಗೆ ಇಟ್ಟಿಲ್ಲ.

ಸೂಸಿದಂ ಕಣೆಗಳಂ ಬಭ್ರುವಾಹನನದಂ ।
ನೇಸರಣುಗನ ಸುತಂ ಬರಿಕೈದು ಪಾರ್ಥಿಯಂ ।
ಗಾಸಿಮಾಡಿದನಂಬುಗಳ ಮಳೆಯೊಳವನೀತನಂ ಮುಸುಕಿದಂ ಶರದೊಳು ॥೧೩॥

ಇಸುವರೆಚ್ಚಂಬುಗಳನೆಡೆಯೊಳಿಕ್ಕಡಿಗೈವ ।
ರಿಸುವರೊರೇರ್ವರಂ ಗಾಯಗಾಣಿಸಿ ಕೆರ ।
ಳ್ದಿಸುವರಶ್ವಧ್ವಜವರೂಥಸಾರಥಿಗಳಂ ತರಿದಿಳೆಗುರುಳ್ಚಿ ಕೂಡೆ ॥
ಇಸುವರೊರ್ವೊರ್ವರ್ಮೈಮರೆದು ಚೇತರಿಸಿಕೊಂ ।
ಡಿಸುವರಾಗ್ನೇಯಾದಿದಿವ್ಯಾಸ್ತ್ರನಿಕರದಿಂ ।
ದಿಸುವರಿಂತವರವರ ಸರಿಯ ಬಾಣಂಗಳಂ ಕರ್ಣಸುತಪಾರ್ಥಸುತರು ॥೧೪॥

ಅಂದಾದ ಕರ್ಣಾರ್ಜುನರ ಕಾಳಗವನವರ ।
ನಂದನರ್ ನಿರ್ಣಯಿಸುತಿರ್ದರೆನೆಶಸ್ತ್ರಾಸ್ತ್ರ ।
ದಿಂದೆ ಶರಸಂಧಾನಸತ್ವಸಾಹಸಲಕ್ಷ್ಯ ಲಳಿಲಾಘವಂಗಳಿಂದೆ ॥
ಮುಂದುವರಿವಗ್ಗಳಿಕೆ ಮುಳಿಸು ಮೂದಲೆ ನೋಡಿ ।
ಬಂದಿ ಭಾರಣೆಬಿಂಕ ಬೆಸೆ ಚಮತ್ಕಾರಂಗ ।
ಳಿಂದೆ ಸಮವಾಗೆ ಕೈದೊರಿದಂ ವೃಷಕೇತು ಬಭ್ರುವಾಹನನ ಮೇಲೆ ॥೧೫॥

ಬಳಿಕಖಿಳದಿವ್ಯಾಸ್ತ್ರದಿಂದೆ ವೃಷಕೇತು ವೆ ।
ಗ್ಗಳಿಸೆ ವಾಡಬವೈಷ್ಣವದೊಳದಂ ಪರಿಹರಿಸಿ ।
ಕೊಳುತರ್ಜುನಾತ್ಮಜಂ ಕೆರಳ್ದಿವನನೆಚ್ಚೊಡುಚ್ಚಳಿಸಿ ತಚ್ಛೋಣಿತವನು ॥
ತೊಳಿಯಲಿಳಿದುವು ಭೋಗವತಿಯ ಜಲಕಂಬುಗಳ್ ।
ಮುಳಿದು ಕರ್ಣಜನಿಸಲ್ಕಾತನಂ ಸುತ್ತಿಸಿತು ।
ಸುಳಿಗಾಳಿಯಂದದಿಂ ಕಣೆಗಳರೆಗಳಿಗೆಪರ್ಯಂತರಂ ಸಂಗರದೊಳು ॥೧೬॥

ಮತ್ತೆ ಹೊಡಕರಿಸಿ ಪಾರ್ಥನ ಸೂನುರೋಷಾಗ್ನಿ ।
ಪೊತ್ತಿ ಕಿಡಿಗೆದರೆ ದಿವ್ಯಾಸ್ತ್ರಮಂ ಪೂಡಿ ತೆಗೆ ।
ಯುತ್ತಲಿವೊ ಕರ್ಣಸುತ ನೀನೆ ಬಿಲ್ಲಾಳಪ್ಪೆ ನಾಂ ಪೊಣರ್ದ್ದತಿಬಲರೊಳು ॥
ಚಿತ್ತಚಂಚಲಮಿಲ್ಲದೀಕ್ಷಿಸೆನುತೆಚ್ಚೊಡೆರ್ದೆ ।
ಗೆತ್ತಿ ಶಿರಮಂ ಕೂಡಿ ಪಿಡಿದಾಗಸಕ್ಕೆಚಿಗಿ ।
ದೆತ್ತಿ ಕೊಂಡೊಯ್ದು ವೃಷಕೇತುವಂ ತಿರುಗಿಸಿತು ದೆಸೆದೆಸೆಗಳಂ ನಭದೊಳು ॥೧೭॥

ಭಾನುಸುತಸೂನುವಂ ನಭಕೆತ್ತಿ ಕೊಂಡೊಯ್ಯು ।
ನಾನಾದೆಸೆಗೆ ತಿರುಗಿಸಿತು ಮುಹೂರ್ತತ್ರಿತಯ ।
ಮೀನೆಲಕೆ ಕೆಡಹದೆ ಮಹಾಶರಂ ಕೆಳಗೆ ಬಿಸ್ಸಿಡಿದು ಸನ್ನದ್ಧರಾಗೆ ।
ಈನರನುಮಾಬಭ್ರುವಾಹನನನುವೊಡನೈದೆ ।
ಬಾನೆಡೆಯೊಳಾತನ ಪಿತಾಮಹಂಗಭಿನಮಿಸಿ ।
ಕಾನನಸರಿತ್ಸಾಗರಂಗಳೊಳ್ಬೀಳದಿಳಿದಂ ಮಣಿಪುರದ ಮಹಿಯೊಳು ॥೧॥

ಮೊಗವೆತ್ತಿ ಫಲುಗುಣಂ ನೋಡುತಿರೆ ಕರ್ಣಜಂ ।
ಗಗನದಿಂ ಬಿದ್ದಿಳೆಗೆ ಪೊಡೆಚಂಡಿನಂತೆ ಪುಟ ।
ನೆಗೆಗೆದ್ದು ರೋಷದಿಂ ಘುಡುಘುಡಿಸಿ ಪಾರ್ಥಸುತನಂ ಪಚಾರಿಸಿ ಕನಲ್ದು ॥
ತೆಗೆದಿಸಲ್ಬಾಣಂಗಳಶ್ವಸಾರಥಿಸತಾ ।
ಕೆಗಳಿಂದಮರ್ದ ರಥಸಹಿತ ಚಿತ್ರಾಂಗದೆಯ ।
ಮಗನಂ ನಭಸ್ಥಳಕೆ ಕೊಂಡಡರ್ದುವು ನಾಕಪರಿಯಂತ ಮಾತ್ರಣದೊಳು ॥೯॥

ನಭದೊಳತ್ಯುಗ್ರದಿಂ ತಪಿಸುವ ದಿವಾಕರ ।
ಪ್ರಭೆಯಿಂದುರಿಯೆ ರಥಂ ಬಿದ್ದನುರ್ವಿಗೆ ಪಾರ್ಥಿ ।
ರಭಸದಿಂ ಪೂರ್ವದೊಳಡರ್ದ ಸಂಪಾತಿ ಗರಿ ಸೀದಿಳೆಗೆ ಬೀಳುವಂತೆ ॥
ತ್ರಿಭುವನಕೆ ಪೊಸತಾಗೆ ಕರ್ಣಜಂ ಮತ್ತೆ ರಿಪು ।
ಸುಭಟನಂ ಮೂರುಬಾಣದೊಳೆಚ್ಚು ದಿವಸದ ।
ಲ್ಲಭನ ಮಂಡಲಲ್ಲಿಗೈದಿಸಿ ಪಚಾರಿಸಿ ಜರೆದು ಕೂಡೆ ಬೊಬ್ಬಿರಿದನು ॥೨೦॥

ಬೊಬ್ಬಿರಿವ ಕರ್ಣಜನ ದನಿಗೇಳ್ದು ರೋಷದಿಂ ।
ದಬ್ಬರಿಸಿ ಗಗದೊಳ್ತನ್ನ ರಥಮಂ ಬಿಟ್ಟು ।
ಹೆಬ್ಬೆಟ್ಟಿದಂತಿವನ ಮಸ್ತಕದ ಮೇಲೆ ಬೀಳಲ್ಕಿವಂ ಕನಲ್ದು ಕೂಡೆ ॥
ಉಬ್ಬಿ ಪುಟನೆಗೆದೆದ್ದು ಸಾಯಕದೊಳೆಚ್ಚನವನ ।
ದೆಬ್ಬಿಸಿದನಾಗಸಕೆ ಮತ್ತೆ ಭೀಭತ್ಸುಕಂ ।
ಡೊಬ್ಬೆರಳನಲ್ಲಾಡಿ ಪೊಗಳಕ್ಕೆ ವೃಷಕೇತು ಫಲುಗುಣಂಗಿಂತೆಂದನು ॥೨೧॥

ತಾತ ನೋಡಂದು ರಣದೊಳ್ತೀರ ಗಾಲಿ ವಸು ।
ಧಾತಳದೊಳಳ್ದೊಡಾಯುತಮಾಗಿ ನಿಲ್ವಿನಂ ।
ಘಾತಿಸದಿರೆಂದು ನಿನ್ನೊಡನೆ ನಮ್ಮಯ್ಯನಾಡಿದವೊಲಾಡದೆ ಸುಮ್ಮನೆ ॥

ಈತನೆನ್ನಸ್ತ್ರದಿಂ ಗಾಸಿಯಾದಪನೆಂದು ।
ಮಾತಾಡುವನಿತರೊಳ್ಕತ್ತಿವನ ಮೇಲೆ ಬಂ ।
ದಾತ ಬೀಳಲ್ಕೊಂವರಿರ್ವರುಂ ಚೇತರಿಸಿಕೊಂಡು ಧುರಕನುವಾದರು ॥೨೨॥

ಮಣಿವರೂಥಾರೂಢರಾಗಿ ಬಳಿಕಿರ್ವರುಂ ।
ರಣರಂಗದೊಳ್ಕಡುಗಿ ಕಾದಿದರ್ಕಾಯದೊ ।
ಳ್ಕಣೆಗಳಿಡಿಯಲ್ಕಂಡಮಂ ಕಚ್ಚಿ ಪಾರಲರುಣಾಂಬುಗಳ್ಕೋಡಿವರಿಯೆ ॥
ಪೊಣರ್ವರಂಬರಕಡರ್ದ್ದೊರ್ವನ್ಮೇದಿನಿಗಿಳಿದು ।
ಪೆಣಗುವರ್ಮತ್ತೊಮ್ಮೆ ನಭದೊಳಿದ್ದೋರ್ವಂ ಧ ।
ರಣಿತಳದೊಳಗೆಯೋರ್ವನಾಗಸದೊಳೊರ್ವನಿರೆಸರಿಸಮದೊಳು ಕಲಿಗಳು ॥೨೩॥

ಭೂಪ ಕೇಳಿಂತೈದುದಿನವೈದೆ ಕಾದಿದರ್ ।
ಚಾಪವಿದ್ಯಾಪ್ರವೀಣರ್ಬಳಿಕ ಪಾರ್ಥಜಂ ।
ಭಾಪುರೇ ವೃಷಕೇತು ನೀನೆ ಪಟುಭಟನಪ್ಪೆ ಲೋಕದೊಳ್ನಾಕೆದೆಯೊಳು ॥
ಶ್ರೀಪತಿಧ್ಯಾನಮಂ ಮಾಡೆನುತೆ ತೆಗೆದಿಸ ।
ಲ್ಕೋಪದಿಂದಾಕಣೆಯನಿವನರಿವನಿತರೋಳ್ಪ್ರ ।
ತಾಪದಿಂ ಕವಲಂಬನೆಚ್ಚು ಕತ್ತರಿಸಿದಂ ಕರ್ಣಜನ ಕಂಧರವನು ॥೨೪॥

ಕಡುಗಿ ಕವಲಂಬುಗಿಯೆ ಕರ್ಣಜನ ತಲೆ ನಭಕೆ ।
ಸಿಡಿದು ಕಂತುಕದಂತೆ ಬಂದು ಬಿದ್ದುದು ಪಾರ್ಥ ।
ನಡಿಗೆ ನಾರಾಯಣ ಮುಕುಂದ ಮಾಧವಯೆನುತೆ ಮುಂಡವತಿವೇಗದಿಂದೆ ॥
ನಡೆದು ರಣದೊಳ್ಮಣಿಪುರೇಂದ್ರನಂ ಪೊಯ್ದುಳಿಗೆ ।
ಕೆಡಹಿ ಪಡೆಯಲ್ಲಮಂ ಸದೆದುರುಳ್ದುದು ನರಂ ।
ಪಿಡಿದೆರಡುಕೈಗಳಿಂದಾಶಿರವನೆತ್ತಿಕೊಂಡೀಕ್ಷಿಸುತಳಲ್ದನಂದು ॥೨೫

ಬಿಟ್ಟಕಂಗಳ್ಬಿಗಿದಪುರ್ಬುಗಳ್ಬಿರೆನೊಸಲ ।
ಬಟ್ಟು ಸೂಸಿದಕುರುಳ್ಥಳಥಳಿಪಕುಂಡಲಂ ।
ಪುಟ್ಟುದುಪ್ಪುಳ್ಮೀಸೆ ಪೊಳೆವಲ್ನಗುವಮೊಗಂ ಕಳಕಳಿಸೆ ಕಳೆಯದಿಂದೆ ॥
ಕಟ್ಟುಗ್ರಮಾಗಿರ್ದತನಿವೀರರಸದೊಂದು ।
ಗಟ್ಟಿಯೆನೆತೋರ್ಪಕರ್ಣಜನ ತಲೆಯಂ ನರಂ ।
ನಿಟ್ಟಿಸುತೆ ಪಣೆಯಂ ಫಣೆಯೊಳಿಟ್ಟು ಪೊಸೆದು ಚುಂಬಿಸಿ ಕಂಬನಿಯೊಳಾಳ್ದನು॥೨೬॥

ಮಗನೆ ನೀನೆಂತು ಮಡಿದೈ ಕೃಷ್ಣರಾಯಂಗೆ ।
ಸೊಗಸಾದುದೇ ನಿನ್ನಳಿವು ಧರ್ಮತನಯಂಗೆ ।
ಮೊಗದೋರ್ಪಸುತರುಂಟೆ ನೀನಲ್ಲದೇನೆಂದಲಳ್ವಳೈ ಕುಂತಿ ನಿನಗೆ ॥
ಪಗೆಯೆಂದು ಕೊಂದೆವಗ್ರಜನನೆಮಗಾತನಿಂ ।
ಮಿಗಿಲೆಂದು ಕಂಡಿಹೆವಲೈ ನಿನ್ನ ನೈವರ್ಗೆ ।
ಸುಗತಿಗುಡುವಾತ್ಮಭವರಿರ್ದಪರೆ ಪೇಳೆಂದು ಹಳವಳಿಸಿದಂ ಪಾರ್ಥನು ॥೨೭॥

ಸಾಲದೆ ಮಹಾಹವದೊಳಭಿಮನ್ಯು ಮಡಿದಳ ।
ಲ್ಬಾಲಕಂ ನೀನಿರ್ದೊಡೇನಕಟ ಕಣ್ಣ ಮುಂ ।
ದಾಲಿಸೈ ತನ್ನ ಮಾತಂ ನುಡಿಸಲಾಗದೇ ನೋಡೆನ್ನನಾದರದೊಳು ॥
ಪಾಲಿಸೈ ತುರಗಮಂ ಮಂದಿಯಂ ನಡೆಸಿನ್ನ ।
ಮೇಲಣುದ್ಯೋಗಮಾವುದು ಕಂದ ನಿನ್ನ ಗುಣ ।
ಶೀಲಮಂ ಭೂಪನೊಳ್ಬಣ್ಣಿಪ ವೃಕೋದರಂಗೇನೆಂಬೆನುಸಿರೆಂದನು ॥೨೮॥

ಮೂಗಿಲ್ಲದಾನನಂ ಲಿಂಗಮಿಲ್ಲದ ಪೀಠ ।
ಮಾಗಿರದೆ ಪಾಂಡವರ ಸಿರಿಯನ್ನು ನೀನಿಲ್ಲ ।
ದ್ಧಾಗ ನಿನ್ನದಟಿಂದೆ ಯೌವನಾಶ್ವಾನುಸಾಲ್ವರ ಸಖ್ಯಮಾದುದೆಮಗೆ ॥
ಯಾಗಮುಹುದರಸಂಗೆ ನಿನ್ನಿಂದೆ ನೀಂ ಪದ್ದು ।
ಕಾಗೆಗೊಡಲಂ ಕೊಟ್ಟು ರಣದೊಳೆನ್ನಂ ಬಿಟ್ಟು ।
ಪೋಗಲಪ್ಪುದೆ ತಂದೆ ವೃಷಕೇತು ಪೇಳೆಂದು ಮರುಗಿದಂ ಸವ್ಯಸಾಚಿ ॥೨೯॥

ಈ ಪರಿಯೊಳಾವೃಷಧ್ವಜನ ತಲೆವಿಡಿದವನ ।
ರೂಪಗುಣಶೀಲಮಂ ನೆನೆನೆನೆದು ಶೋಕಪ್ರ ।
ಳಾಪದಿಂ ನರನಳಲುತಿರಲತ್ತ ಕರ್ಣಸುತನಟ್ಟೆ ಬಂದಪ್ಪಳಿಸಲು ॥
ಧೂಪಿಸಿ ಧರೆಗೆ ಬಿದ್ದೊಡನೆ ಮೂರ್ಛೆತಿಳಿದೆದ್ದು ।
ಚಾಪವ ಕೊನೆಗೆ ಮೊಗವನಿಟ್ಟೋರೆಯಾಗಿ ನಿಂ ॥
ದಾಪಾರ್ಥನಂ ನೋಡಿ ನಸುನಗುತೆ ಚಿತ್ರಾಂಗದೆಯ ತನುಜನಿಂತೆಂದನು ॥೩೦॥

ಎಲೆ ಪಾರ್ಥ ವೈಶ್ಯಸಂಭವರಾವಹೆವು ನಿಮ್ಮ ।
ಬಲಸಮಾಜದೊಳಂಬುಗಳ ಪಸರಮಂ ಹರಹಿ ।
ಕಲಿವಿನಗ್ಗವಲಾಭಮಂ ಪಡೆವವಟರ ಶಿರಂಗಳಂ ಕೊಂಡೆವರಸಿ ॥

ಕಲಿಗಳೈತಂದು ಜೀವಕೆ ಸಂಚಕಾರಮಂ ।
ಸಲೆ ಬೇಡಿನೊಡೆ ಕೊಟ್ಟಿವಿಚ್ಛೆಯುಳ್ಳೊಡೆ ನಿನ್ನ ।
ತಲೆಯ ಜೆಲೆಗಿದೆ ಸಾಹಸವ್ರವ್ಯಮೆನ್ನೊಳೆಂದಾರ್ಜುನಿ ಪಚಾರಿಸಿದನು ॥೨೧॥

ಇವರೊಳೇನಿಹುದಿನ್ನು ವೀರನೀಕರ್ಣಸುತ ।
ಸಿವನ ತಲೆಯುಂ ಸಮರ್ಪಿಸು ಮಹಾದೇವಂಗೆ ।
ತವೆ ರುಂಡಮಾಲೆಯೊಳ್ಪೂಜ್ಯವಾಗಿಹುದೀಶ್ವರಪ್ರೀತಿಯಹುದು ನಿನಗೆ ॥
ಶಿವನಂದು ಪಾಶುಪತಬಾಣಮಂ ಕೊಟ್ಟುದಿ ।
ಲ್ಲವೆ ನಿಜಸ್ವಾಮಿಯಂ ಮರೆದಪರೆ ಸಾಕಿದರ ।
ಬವಣಿಯೇತಕೆ ನಮಗೆ ಕಾದುವೆಯೊ ತುರಗಮಂ ಬಿಟ್ಟಪೆಯೊ ಪೇಳೆಂದನು ॥೨೨॥

ನೋಡಿದಂ ತಿರುಗಿ ಕಣ್ಣಾಲಿಗಳ್ಕೆಂಪಡರೆ ।
ಮಾಡಿದಂ ಕೋಪಮಂ ಧೈರ್ಯದಿಂದಳಲನೀ ।
ಡಾಡಿದಂ ಕರ್ಣಜನ ಶಿರವನಲ್ಲಿರಿಸಿದಂ ಕೊಂಡನುರುಕಾರ್ಮುಕವನು ॥
ತೀಡಿದಂ ಜೇಗೈದು ತಿರುವಿನೊಳ್ಬಾಣಮಂ ।
ಪೂಡಿದಂ ತೆಗೆದೆಚ್ಚು ರುಧಿರಪ್ರವಾಹಮಂ ।
ತೋಡಿದಂ ಬಭ್ರುವಾಹನನ ಸರ್ವಾಂಗದೊಳ್ಕಲಿಪಾರ್ಥನಾಕ್ಷಣದೊಳು ॥೨೩॥

ವೈಸಿರಿಯಳಲ್ಗಳಿವು ಲೇಸಾಯ್ತು ಪಗೆಯ ಮಗ ।
ನೈಸಲೇ ಕರ್ಣಜಂ ಸಾಕಿವೇತಕೆ ಬರಿದೆ ।
ವೈಸಿಕದ ಬಾಣಪ್ರಯೋಗಂಗಳಿಂದ್ರಕೀಲದೊಳುಮಾಕಾಂತನಿಂದೆ ॥
ಕೈಸಾರ್ದಸಾಯಕವನುಗಿಯೆನುತೆ ಪಾರ್ಥನಂ ।
ಸೈಸರಿಸದೆಚ್ಚನೀಬಭ್ರುವಾಹನನ ಕೈ[೧] ।
ಗೈಸಮ ನಭೋವಲಯಮೆನೆ ಕವಿದುವಂಬುಗಳ್ದೇವತತಿ ಬೆರಗಾಗಲು ॥೨೪॥

ಮತ್ತವು ಮುಸುಳ್ವಂತೆ ನರನಾರ್ದು ತೆಗೆದಿಸ ।
ಲ್ಪೆತ್ತುವು ಸರಳ್ಗಳೊಂದಯುತನಿಯುತಮಂ ।
ಪೊತ್ತುವು ನಭಸ್ಥಳಕೆ ಕೊಂಡು ರಿಪುಸೇನೆಯಂ ತಾರೆಗಳನುದಿರಿಸಿದುವು ॥
ಕಿತ್ತುವು ಕುಲಾದ್ರಿಗಳನಾಗಸದ ಬಟ್ಟೆಯಂ ।
ಕೆತ್ತುವು ದಿಗಂತಮಂ ತುಂಬಿದುವು ಬಾಣಂಗ ।
ಳಿತ್ತುವು ಜಗತ್ರಯಕೆ ಕಂಪಮಂ ಪಿಂತೆಂದುಮಿಲ್ಲಿದು ವಿಚಿತ್ರಮೆನಲು ॥೨೫॥

೧ ಪಾ ಕಡೆ.

ಕೊರೆದುವಂಗೋಪಾಂಗಮಂ ಪಾರ್ಥನಂಬುಗ ।
ಳ್ತಿರೆದಜಾಳಾಂದ್ರದಂತಾಯ್ತುಗಿದಬಟ್ಟೆಗ ।
ಳ್ಕರೆದಪೆರ್ಮೃಳೆಯಿಂದೆ ನನೆದಜಾದಿನ ಗಿರಿಯೊಳಿರದಿಳಿವಕೆಂಬೊನಲ್ಗಳ ॥
ತೆರದೊಳಿಸೆದುವು ರಕ್ತಧಾರೆಗಳ್ಗಾಯದೊ ।
ಳ್ಮರೆದನೊಡಲಂ ನಿಮಿಷಕೊಡನೆ ತರಹರಿಸಿದಂ ।
ಜರೆದನರ್ಜುನನಂ ರಣಾಗ್ರದೊಳ್ಮೂದಲಿಸಿ ಬಭ್ರುವಾಹನಂ ಕನಲ್ದು ॥೩೬॥

ಕರ್ಣಭೀಷ್ಮದ್ರೋಣರಂ ಗೆಲ್ದು ಕೊಟ್ಟಂ ಸು ।
ಪರ್ಣಧ್ವಜಂ ನಿನಗೆ ಕರುಣದಿಂ ಕಾದಿದನ ।
ಪರ್ಣಾಧವಂ ನಿನ್ನೊಳಗ್ಗಳಿಕೆ ಪಿರಿದೆಂದು ಮೇದಿನಿಯೊಳರಿಯಪವರು ॥
ವರ್ಣಿಸುವರೆಂದು ಬೆರೆತಿಹೆ ತನ್ನ ಸಮರಮಂ ।
ನಿರ್ಣೈಸಿದೊಡೆ ವೀರನಹುದೆಂದು ಬಾಣಮಯ ।
ದರ್ಣವಮಿದೆತ್ತಣೆಂ ಮೇರೆದಪ್ಪಿದುದೆನಲ್ಬಭ್ರುವಾಹನನೆಚ್ಚನು ॥೩೭॥

ಕೆತ್ತಿದುವು ದಿಕ್ತಟದ ಭಿತ್ತಿಗಳನದ್ರಿಗಳ ।
ನೆತ್ತಿದುವು ಧರೆಯನುಚ್ಚಳಿಸಿ ಕೂರ್ಮನ ಬೆನ್ನ
ನೊತ್ತಿದುವು ಕೆಲಕಿದುವು ಸಾಗರವನಾದಿತ್ಯಮುಂಡಲವನಂಡಲೆದುವು ॥
ಮುತ್ತಿದುವು ಬಾಂದಳವನೆಲ್ಲಮಂ ಕೆಲಕೆಲವು ।
ಪತ್ತಿದುವು ಪರಿದುವಿಳಿದುವು ಸಕಲಲೋಕಕ್ಕೆ ।
ಬಿತ್ತಿದುವು ಭೀತಿಯಂ ಬಭ್ರುವಾಹನನ ಶರಜಾಲಮುದನೇವೇಳ್ವೆನು ॥೩೮॥

ಹಾರಿಸಿತು ರಥಮಂ ತುರಗಮಂ ರುಧಿರಮಂ ।
ಕಾರಿಸಿತು ಸಾರಥಿಯ ಜೀವಮಂ ಸುರಲೋಕ ।
ಕೇರಿಸಿತು ಛತ್ರಚಾಮರಪತಾಕಾಳಿಯಂ ಕೆಂಪರಿಯ ಗಾಳಿಯಿಂದೆ ॥
ತೂರಿಸಿತು ಟೆಕ್ಕೆಯದ ಮೇಲೆ ಹನುಮಂತನಂ ।
ಚೀರಿಸಿತು ಪಾರ್ಥನ ಶರೀರದೊಳ್ಬಟ್ಟೆಯಂ ।
ತೋರಿಸಿತು ಬಭ್ರುವಾಹನನ ಶರಸಂಕುಲಂ ಫಲುಗುಣಂ ಕಂಪಿಸಲ್ಕೆ ॥೩೯॥

ಮತ್ತೆ ಸಂಗರದೊಳನ್ಯೋನ್ಯಮುವರಿರ್ವರ್ಗೆ ।
ಚಿತ್ತದೊಳ್ಮುಸುಕಿತು ಘನಕ್ಷಾತ್ರತಾಮಸಂ ।
ಪೊತ್ತಿತತಿರೋಷಾಗ್ನಿ ಬಳಿಕೊರ್ವರೊರ್ವರಂ ಜೈಸುವಭಿಲಾಷೆಯಿಂದೆ ॥

ತೆತ್ತಿಸಿವಕಣೆಗಳಿಂ ನೈಗಳೈಮಿಗದೊಲಿರೆ ।
ನೆತ್ತರೊರತೆಗಳಿಂದ ತನುಗಳುರೆ ಪೂತನು ।
ಳ್ತುತ್ತಗನೊಲಿರೆ ತಂದೆಮಕ್ಕಳೆಚ್ಚಾಡಿದರ್ನಿಚ್ಚಟದೊಳಚ್ಚರಿಯೆನೆ ॥೪೦॥

ಜನಪ ಕೇಳ್ಜಾಹ್ನವಿಯ ಶಾಪದಿಂ ಬಳಿಕ ಪಾ ।
ರ್ಥನ ಸತ್ವಮೆಳದಾಗಿ ಬರೆ ಕಂಡು ಬಭ್ರುವಾ ।
ಹನನೆಂದನೆಲೆ ಧನಂಜಯ ತನ್ನ ಜನನಿ ಚಿತ್ರಾಂಗನೆ ಪತಿವ್ರತೆ ಕಣಾ ॥
ಅನಿಮಿತ್ತಮಾಕೆಯಂ ಪಳಿದಕಾರಣದಿಂದೆ ।
ನಿನಗೆ ಕೈಗುಂದುತಿದೆ ಸಾಕಿನ್ನು ಕೃಷ್ಣನಂ ।
ನೆನೆ ಮರುಳೆ ಮುರಹರನ ಸಾರಥ್ಯಮಿಲ್ಲದಾರಂ ಗೆಲ್ದೆ ಹೇಳೆಂದನು ॥೪೧॥

ಕ್ಷೋಣಿಗೋಸುಗ ಕೊಂದೆ ನೀನಂದು ಕರ್ಣನಂ ।
ಮೇಣವನ ತನಯನ ನೆಳಲ್ಗೆ ಸೇರದೆ ಮನದ
ಕೇಣದಿಂದೆನ್ನ ಕೈಯಿಂದೆ ಕೊಲಿಸಿದೆ ಸಾಕು ಹಗೆ ಹರಿದುದಿನ್ನು ನಿನಗೆ ॥
ಪ್ರಾಣಮಂ ಕಾದುಬಿಡುವೆಂ ಪೋಗು ಬಿಲ್ಗೊಳಲ್ ।
ತ್ರಾಣಮುಳ್ಳೊಡೆ ನಿಂದು ಚಿತ್ತದೊಳ್ನೆನೆ ಚಕ್ರ ।
ಪಾಣಿಯಂ ಬಲಮಪ್ಪುದೆಂದು ಜರೆದಂ ಬಭ್ರುವಾಹನಂ ಫಲುಗುಣನನು ॥೪೨॥

ಹೂಣೆಹೊಕ್ಕಿರಿದು ತಾಂ ಪಗೆವನಂ ಗೆಲ್ದೊಡಂ ।
ಮಾಣದೆ ರಣಾಗ್ರದೊಳ್ಮಡಿದೊಡಂ ಕ್ಷತ್ರಿಯ ।
ಗೂಣೆಯಮೆ ಕರ್ಣನಂ ಕೊಂದೊಡೇನವನ ಸುತನಳಿದೊಡೇನಾಹವದೊಳು ॥
ಕ್ಷೀಣಬಲನೇ ತಾನಕಟ ನೀಂ ಸಮರ್ಥನೇ ।
ಕಾಣಬಹುದೆನುತೆ ಭೀಮಾನುಜಂ ಕೋಪದಿಂ ।
ಬಾಣಂಗಳಂ ಮಗನಮೀಲೆ ಕರೆಯಲ್ಕವಂ ಪರೆಗಡಿಯುತಿಂತೆಂದನು ॥೪೩॥

ಪ್ರೀತಿಯಿಂ ದ್ರೋಣನಿತ್ತಂಬುಗಳ್ನೃಥಾ ।
ದಾತಿಮುಖ್ಯಾಮರರ್ಕೊಟ್ಟ ಬಾಣಂಗಳ ।
ಜ್ಞಾತಮಾದುವು ನಿನಗೆ ಮರುಳೆ ನಿನ್ನೊಡನಾಡಿ ಕೃಷ್ಣನಂ ಮರೆದೆಯಾಗಿ ॥
ಏತಕಾಹವಮಿನ್ನು ಸಾಕೆನಲ್ಫಲುಗುಣಂ ।
ಖಾತಿಯಿಂ ಮಗುಳಿಸಲ್ಕಾಬಭ್ರುವಾಹನಂ ।
ಘಾತಿಸಿದನಡಿಗಡಿಗೆ ಪಾರ್ಥನಂ ಜಾಹ್ನವಿಯ ಶಾಪದಿಂ ಕೈಗಿಡಲ್ಕೆ ॥೪೪॥

ಸುರನದಿಯು ಶಾಪದಿಂ ಮೋಹಿಸಿ ನರಂ ಮುಳಿದು ।
ಧುರದೊಳಾವಾವಂಬನಿಸ ವನೆಸನೆಲ್ಲಮುಂ ।
ಪಸೆಗಡಿದು ಕೋಪಂ ಪೂಡಿದಂ ಬಭ್ರುವಾಹಂ ತನ್ನ ಕಾರ್ಮುಕದೊಳು ॥
ನಿರುಪಮಜ್ವಾಲಾಮುಖದ ಕಾಮರೂಪದುರು ।
ತರವಪಬಳಿಯಿಂದದರ್ಧಚಂದ್ರಾಕೃತಿಯ ।
ಶರವನುತ್ಕೀರ್ಣಸ್ಫುಲಿಂಗಪ್ರಕರವನುಗ್ರಪ್ರಭಾಭೀಕರವನು ॥೪೫॥

ಅರ್ಕಾದಿಸರ್ವಗ್ರಹಂಗಳಿಂದ್ರಾದಿದೇ ।
ವರ್ಕಳಾಂಗಿರಸಾದಿಮುನಿಗಳೆಲ್ಲರ್ಮರುಗಿ ।
ದರ್ಕರೆದುವಸುಣಾಂಬುವಂ ಮೇಘಮುದುರಿತುಲ್ಕಾಪಾತಮಿಳೆನಡುಗಿತು ॥
ಶರ್ಕರಾವರ್ತಂ ಪ್ರವರ್ತಿಸಿತು ಪಾರ್ಥಜಂ ।
ಕರ್ಕಶದಬಾಣಮಂ ತೆಗೆದಿಸಲ್ಕಿಡಿಗಳ ಪೊ ।
ದರ್ಕವಿಯೆ ದೆಸೆದೆಸೆಗೆ ಭುಗುಭುಗಿಸುವಜ್ವಾಲೆ ಮೇಲ್ವಾಯ್ದು ಬರುತಿರ್ದುದು ॥೪೬॥

ಅತ್ಯುಗ್ರಸಾಯಕಂ ಬರೆ ಪಾರ್ಥನಿದಿರಾಗಿ ।
ಪ್ರತ್ಯಸ್ತ್ರದಿಂದಿಸಲದಂ ಕೊಳ್ಳದೈತರ ।
ಲ್ಸತ್ಯಭಾಮಾಕಾಂತನಂ ಚಿಂತಿಪನಿತರೋಳ್ತೀವ್ರದಿಂ ಕೊರಳನರಿಯೆ ॥
ಅತ್ಯಧಿಕಕುಂಡಲದ ತಲೆಚಿಗಿದು ನಭದೊಳಾ ।
ದಿತ್ಯಮಂಡಲಮಿಳೆಗುರುಳ್ವಂತೆ ಮುನಿಗಣ ।
ಸ್ತುತ್ಯ ಕೇಶವ ಕೃಷ್ಣಯೆನುತೆ ಬಿದ್ದುದು ಕರ್ಣಸುತನ ಶಿರದೆಡೆಗೆ ಪೋಗಿ ॥೪೭॥

ಕಲಿವೃಷಧ್ವಜನ ಶಿರದೊಡನೆ ಕೂಡಿತು ನರನ ।
ತಲೆ ಕರ್ಣಜನ ಕಬಂಧವನಪ್ಪಿಕೊಂಡುದಾ ।
ಫಲುಗುಣನ ಮಂಡಮಿದನೆಲ್ಲರುಂ ಕಂಡು ಮರುಗಿದರಾಗ ಕರುಣದಿಂದೆ ॥
ನಲವಿಂದೆ ಬೊಬ್ಬಿರುದುದಾಬಭ್ರುವಾಹನನ ।
ಬಲಮೈದೆ ಮೊಳಗಿದುವು ವಾದ್ಯಂಗಳಾಹವದ ।
ಗೆಲವಿಂದೆ ಪುರಕೆ ತಿರುಗಿದನವಂ ವಂದಿಸಂದೋಹದ ಪೊಗಳ್ಕೆಯಿಂದೆ ॥೪೮॥

ತ್ರಿಜಗಂ ಮರುಗುವಂತೆ ಕಾರ್ತಿಕೈಕಾದಶೀ ।
ಕುಜವಾರದುತ್ತರಾನಕ್ಷತ್ರದಂದು ವಾ ।
ರಿಜಮಿತ್ರನಸ್ತಮಯದೊಳ್ಕೃಷ್ಣಯೆನುತರ್ಜುನನ ತಲೆ ಬೀಳಲು ॥

ವಿಜಯೋತ್ಸವದೊಳೈದಿದಂ ಬಭ್ರುವಾಹನಂ ।
ನಿಜಪುರಕೆ ಗುಡಿತೋರಣದೊಳೆಸೆಯೆ ಬಣ್ಣಿಸಲ್ ।
ಪ್ರಜೆಗಳಂಗನೆಯರಾರತಿಪುಷ್ಪದಧಿಲಾಜದೂರ್ವೆಯೊಳಿದಿರ್ಗೊಳಲ್ಕೆ ॥೪೯॥

ಮಿಗೆ ವಿಜಯೋತ್ಸವದಿಂದೆ ಪೌರಜನದೊಸಗೆಯಿಂ ।
ಬಗೆಬಗೆಯುಸಿಂಗರವ ಪೆಣ್ಗಳ ಸೊಡರ್ಗಳಿಂ ।
ನಗರಪ್ರವೇಶಮಂ ಮಾಡಿದಂ ಬಭ್ರುವಾಹನನಿತ್ತಲರಮನೆಯೊಳು ॥
ಸೊಗಸಿಂದುಲೂಪಿಸಹಿತಿರುತಿರ್ದಚಿತ್ರಾಂಗ ।
ದೆಗೆ ಬಂದ ಸುದತಿಯರ್ದೇವಿ ನೀನೇಂ ನೋಂತು ।
ಮಗನಂ ಪಡೆದೆಯೊ ನರನಂ ಕೊಂದು ಬರ್ಪನಾರತಿಗಳಂ ತರಿಸೆಂದರು ॥೫೦॥

ಮಾನಿನಿಯರಿಂತಾಗ ಚಿತ್ರಾಂಗದೆಗೆ ನಿನ್ನ ।
ಸೂನು ಕಲಿಪಾರ್ಥನಂ ಸಮರದೊಳ್ಕೊಂದು ಸುಂ ।
ಮಾನದಿಂದೈತಪ್ಪನೆಂದು ಪೊಗಳಲ್ಕೇಳಿ ಹಮ್ಮೈಸಿ ಬಿದ್ದಿಳೆಯೊಳು ॥
ಹಾ ನಾಥ ಗಟ್ಟಿನಕಟೆಂದು ಕಂಬನಿಯೊಳ ।
ಳ್ದಾನಾರಿ ದುಃಖಾರ್ತೆಯಾಗಲಂತಃಪುರದ ।
ಮೀನಾಕ್ಷಿಯರ್ಕೂಡೆ ರೋದಿಸಲ್ಪೆರ್ಚಿತು ವಿಷಾದರವಮರಮನೆಯೊಳು ॥೫೧॥

ರಾಜಾಲಯದ್ವಾರದೊಳ್ತೇರನಿಳಿದು ನೀ ।
ರಾಜನಾದಿಗಳಿಂದಿದಿರ್ಗೊಂಬಸಂಭ್ರವ ದ ।
ರಾಜವದನೆಯರೊಳಗೆ ಚಿತ್ರಾಂಗದೆಯು ಶೋಕದಿಂದಮಾರ್ತೆಯರಾಗಿರೆ ॥
ಈಜಯೋತ್ಸವದೊಳಿಂತೀವಿಷಾದಧ್ವನಿ ವ ।
ಧೂಜನಕಿದೇಕೆನುತೆ ಪೊಕ್ಕನಂತಃಪುರವ ।
ನಾಜನನಿಯಂದಿರವಂ ಕಂಡು ಬೆರಗಾಗಿ ಪಾರ್ಥಸುತನಿಂತೆಂದನು ॥೫೨॥

ಅಪಜಯಂ ತನಗಾದುದಿಲ್ಲ ಸಂಗ್ರಾಮದೊ ।
ಳ್ವಿಪರೀತಮೇತಕಿಂತಾನಂದದೊ ।
ಳ್ಕುಪಿತಮುಖನಾಗಿ ತನ್ನಂ ಜರೆದೊಡರ್ಜುನನ ಶಿರವನರಿದೆಂ ಧುರದೊಳು ॥
ರಿಪುಭಯಂಕರಕರ್ಣತನಯಂಗೆ ಸಂಗರದೊ ।
ಳುಪೆಹತಿಯನಿತ್ತೆಂ ಪ್ರಯಾಸದಿಂದದಕೆ ನೀಂ ।
ತಪಿಸಲೇಕೆಂದು ಕಣ್ಣೀರ್ದೊಡೆದು ಮಾತೆಯಂ ಸಂತೈಸಲಿಂತೆಂದಳು ॥೫೩॥

ಲೇಸುಮಾಡಿದೆ ಮಗನೆ ಪಗೆಯಾದನೇ ನರಂ ।
ವಾಸಿ ಬಂದುದೆ ನಿನಗೆ ಮತ್ಕಾಂತನಳಿದನೇ ।
ವಾಸವನ ಸೂನು ಮೃತನಾದನೇ ಧರ್ಮಾನುಜಂ ಪ್ರಾಣಮಂ ತೊರೆದನೇ ॥
ವಾಸುದೇವನ ಸಖಂ ಮಡಿದನೇ ನಿನ್ನಿಂದ ।
ದಾಸುರಪರಾಕ್ರಮದೊಳಾತ್ಮಪಿತೃಘಾತಮಂ ।
ಹೇಸದೆಸಗಿದರುಂಟೆ ಸುಡಲಿ ಸುತರೇಕೆಂದೆಳಲ್ದಳಾಚಿತ್ರಾಂಗದೆ ॥೩೪॥

ಈ ಕರ್ಣಸೂತ್ರವಿ೯ಕರ್ಣತಾಟಂಕವಿಾ ।
ಶ್ರೀಕರಂ ನಿಜಜನನಿಗೇಕೆಂದು ಬಿಡಿಸಿದೈ ।
ಸಾಕಿನ್ನು ಮಗವೊಮ್ಮರಳಿದುದಂ ಕೇಳ್ದಿಂತು ಸೈರಿಪಳೊ ಕುಂತಿದೇವಿ ॥
ಭೂಕಾಂತನೇಗೈದಪನೊ ಧರ್ಮರಾಜನವಿ ।
ವೇಕದಿಂ ಬಾಳ್ಕೆಗಿಡಿಸಿದೆಯೆಂದು ತನಯನಾ ।
ಶೋಕದಿಂ ಮಿಗೆ ಬೈದಳಲ್ದಚಿತ್ರಾಂಗದೆಗುಲೂಪಿ ಬಳಿಕಿಂತೆಂದಳು ॥೩೫॥

ದೇವಿ ನಿಲ್ಲಿನ್ನುಮರ್ಜುನನ ಮೃತಿ ಸಂಶಯಂ ।
ಭಾವಿಸುವೊಡೆನಗೊಂದು ಕುರುಪುಂಟು ತನ್ನ ಕೇ ।
ಳೀವನದೊಳಂದು ಪಾರ್ಥಂ ತನಗೆ ತೋರಿದಂ ದಾಡಿಮದ್ರುಮಮೈದನು ॥
ಆವದಿನಕೊಣಗುವುವು ತರುಗಳಾದಿನಕೆನ್ನ ।
ಜೀವಕಳಿವಹುದೆಂದು ತಾನದಂ ನೋಡಿ ಬಹೆ ।
ನೀವಿಷಾದಂ ಬೇಡ ಸೈರಿಸೆನೆ ಕಳುಹಿದಳುಲೂಪಿಯುಂ ಚಿತ್ರಾಂಗದೆ ॥೩೬॥

ಕ್ರೀಡಾವನಕೆ ಪೋಗಿ ನಿಮಿಷದೊಳಹೀಂದ್ರಸುತೆ ।
ನೋಡಿ ಬಂದಲ್ಲಿಯು ದವಾಗ್ನಿಯಿಂದಾಪಂಚ ।
ದಾಡಿಮದ್ರುಮವೊಣಗಿತರ್ಜುನನ ಮೃತಿ ದಿಟಂ ನಡೆ ಪೋಪೆವಲ್ಲಿಗೆಂದು ॥
ಪೀಡಿಸುವಶೋಕದಿಂ ಚಿತ್ರಾಂಗದೆಗೆ ನುಡಿಯೆ ।
ಕೂಡೆ ಪೊರೆಮುಟ್ಟೆಲ್ಲರುಂ ರಣಕೆ ನಡೆತಂದು ।
ಜೋಡಾಗಿ ಬಿದ್ದಿರ್ದಕರ್ಣಸುತಪಾರ್ಥರಂ ಕಂಡಲ್ಲಿ ಕೆಡೆದೆಳಲ್ದರು ॥೩೭॥

ಶೀತೋಷ್ಣರುಚಿಗಳಂ ಗಗನಗತಿಯಂ ಬಿಟ್ಟು ।
ಭೂತಳದ ಮೇಲೆ ರವಿಶಶಿಗಳೆಸೆವಂತೆ ಪುರು ।
ಹೂತಸುತಕರ್ಣಜರ ತಲೆಗಳೊಪ್ಪಿರೆ ಕಂಡುಲೂಪಿಚಿತ್ರಾಂಗದೆಯರು ॥

ಕಾತರಿಸಿ ಕರಗಿ ಕಂಬನಿಯೊಳಾಳ್ದಾಗ ಶೋ ।
ಕಾತಿಶಯದಿಂದೆ ಪಾರ್ಥನ ಪಾದದೊಳ್ಪೊರ ।
ಳ್ದಾತನ ಗುಣಗಳಂ ಸಾಲ್ಗೊಳಿಸಿ ಬಣ್ಣಿಸಿ ಪೊರಳ್ದು ಗೋಳಿಡುತಿರ್ದರು ॥೫೮॥

* [ನಿನ್ನಂಗಸಂಗಮನಗಲ್ದಾಯ್ತು ಪಲಕಾಲ ।
ಮಿನ್ನೆಮ್ಮ ನೆರೆಯಲಾಗದೆ ನಾಥ ಮೂಜಗದೊ ।
ಳಮನ್ನಿಸಲ್ಕಿನಗೆ ಪಡಿಯಹರುಂಟೆ ರೂಪಗುಣವಿಕ್ರಮಪ್ರೌಢಿಗಳೊಳು ॥
ಭಿನ್ನಿಸದೆ ಕೆಚ್ಚೆದೆಯ ಸತಿಯರಾವಸುವಿಡಿದೆ ।
ವಿನ್ನೆಗಂ ಕೇಳ್ದಂತು ಸೈರಿಪರೊ ಕಾಂತನೊ ।
ಳ್ಳನ್ನಿಯುಳ್ಳರಸಿಯರ್ದ್ರೌಪದಿಯಸುಭದ್ರೆಯರದೆಂತುಳಿವರಕಟೆಂದರು] ॥೫೯॥

ಅಡಿಯೋಳ್ಪೊರಳ್ದು ಕಾಯುವನಪ್ಪಿ ಕೈಗಳಂ ।
ಪಿಡಿದುರಸ್ಥಳಕೆ ತೆಗೆದೊಂದಿಸಿ ಕೊರಲ್ಗೆ ಕಡಿ ।
ವಡೆದ ತಲೆಯಂ ಕೂಡಿಸಿ ನೋಡಿ ಮುಂಡಾಡಿ ಪಣೆಗಿಟ್ಟು ಮೊಗಮಂ ಚುಂಬಿಸಿ॥
ಒಡನೊಡನೆ ಪಾರ್ಥನ ಚರಿತ್ರಮಂ ಸಾಲ್ಗೊಳಿಸಿ ।
ನುಡಿನುಡಿಗಳಲ್ದು ಕೆಲದೊಳ್ಕೆಡೆದ ಕರ್ಣಜಂ ।
ಗೊಡಲುರಿಯೊಳಕಟ ಸುತಹಾಯೆಂದು ಮರುಗಿದರುಲೂಪಿಚಿತ್ರಾಂಗದೆಯರು॥೬೦॥

ಬಳಿಕ ಚಿತ್ರಾಂಗದೆ ಕುಮಾರನಂ ನೋಡಿ ಕೊಲೆ ।
ಗೆಳಸಿದೈ ಜನಕಂಗೆ ಜನನಿಯರ್ನಾವಿರ್ವ ।
ರುಳಿಯಲೇಕಿನ್ನಕಟ ವೈಧವ್ಯಂ ತಾಳಬಲ್ಲೆವೆ ಮಹೀತಳದೊಳು ॥
ಸೆಳೆದುಪೊಡೆ ಖಡ್ಗದಿಂದೆಮ್ಮೀಶಿರಂಗಳಂ ।
ಬಳಿಕೈದೆ ಭಾರ್ಗವಂ ಕೊಂದುದಿಲ್ಲವೇ ತಾಯ ।
ನಳುಕದಿರ್ಪಿತನ ಮಾತೃದ್ವಯದ ವಧೆ ನಿನಗೆ ಸಫಲಮಾದಪುದೆಂದಳು ॥೬೧॥

ತಾಯ ಮಾತಂ ಕೇಳ್ದು ಶೋಕಕಲುಷಿತನಾಗಿ ।
ಪ್ರೀಯದಿಂ ಪೋಗಿ ಕಂಡೊಡೆ ತನುಜನಲ್ಲೆಂದು ।
ನೋಯೆ ನುಡಿದಾಹವಂ ಬೇಕೆಂದೊಡೀತನಂ ಕೊಂದೆನಾಂ ಪಂತಮೆಂದು ॥
ದಾಯತಪ್ಪಿದ ಬಳಿಕ ಪೇಳ್ದೊಡೇನಹುದಿನ್ನು ।
ಹೇಯಮಾದುದು ತನ್ನ ಬಾಳ್ಕೆ ಪಿತೃವಧೆಯೊಳೀ ।
ಕಾಯಮಂ ಬಿಡುವೆನೀಗಳೆ ನೋಳ್ಪುದೆಂದವಂ ಕಿಚ್ಚುವುಗಲನುವಾದನು ॥೬೨॥

* ಸೂ— ಪರೀಕ್ಷೆಗೆ ೫೯ ನೆಯ ಪದ್ಯವನ್ನು ಬಿಟ್ಟದೆ.

ತಂದೆಯಂ ಕೊಂದುಳಿದನೆಂದು ಲೋಕದ ಜನಂ ।
ನಿಂದಿಸದೆ ಬಿಡದಿದಕೆ ನಿಷ್ಕೃತಿಗಳಂ ಕಾಣೆ ।
ನೊಂದುಮಂತ್ರಧ್ಯಾನಜಪತೀರ್ಥಯಾಗಯೋಗಂಗಳಿಂ ಕಳೆದುಕೊಳಲು ॥
ಸಂದಿಗ್ಧಮಾಗಿರ್ದ ಪಾತಕಂ ಪೋಪುದು ಮು।
ಕುಂದಸ್ಮರಣೆಯಿಂದಮರ್ಜುನಂ ವೈಷ್ಣವಂ ।
ಬಂದುದಪಕೀರ್ತಿ ನಾಂ ನಾಚದೆಂತಿರ್ದಪೆಂ ಪುಗುವೆನಗ್ನಿಯೊಳೆಂದನು ॥೬೩॥

ಅನಲಪ್ರವೇಶಮಂನಿಶ್ಚಯಿಸಿ ಬಭ್ರುವಾ ।
ಹನನಗುರುಚಂದನದ ಕಾಷ್ಠಂಗಳಂ ತರಿಸು।
ವನಿತರೊಳ್ಕಂಡು ಚಿತ್ರಾಂಗದೆ ಕನಲ್ದು ಸುತನಂ ಬೈದು ಫಲುಗುಣಂಗೆ ।
ವನಜನಾಭಂ ಮಿತ್ರನಿನ್ನೆಗಂ ಮನದೊಳರಿ ।
ದನುಪಮಕೃಪಾಳು ತಾನಿಲ್ಲಿಗೈದದೆ ಮಾಣ್ದ ।
ಪನೆ ಸ್ಮರಿಸನ್ನೆಗಂ ನರನ ಜೀವಕ್ಕೆ ಪೊಣೆ ದೇವಪುರ ಲಕ್ಷ್ಮೀಶನು ॥೬೪॥

ಇಪ್ಪತ್ತುಮೂರನೆಯ ಸಂಧಿ ಸಂಪೂರ್ಣಂ

೨. ಬಸವಪುರಾಣ

೪೧ನೆಯ ಸಂಧಿ.

ಸೂಚನೆ॥ ಕನ್ನೆ ಯಿಟ್ಟಣ್ಣೆ ವಾಲಂ ।
ಮುನ್ನ ನೀಂಟುತ ಕಲ್ಲಿನಾಥಂ ।
ತನ್ನು ದರದೊಳಗಿರಿಸಿದಂ ಕೋಳೂರ ಕೊಡಗೂಸ ॥

ಪದ॥ ಧಾರುಣೀವಳಯದೊಳೆಸವ ಕೋ ।
ಳೂರೊಳುತ್ತಮ ಶೈವಧರ್ಮಾ ।
ಚಾರನೋರ್ವ ಶಿವಾರ್ಚಕಂ ಶಿವದೇವನೆಂಬಾತ ॥
ಕ್ಷೀರಪೂಟ್ಟಳವಂ ಶಿವಂಗವ ।
ಧಾರೆನುತ್ತರ್ಪಿಸಿದಿನಂಪ್ರತಿಯಿಂದೆಭಜಿಸುತ್ತ ॥೧॥

ಒಂದು ದಿವಸಂ ದೇವಕಾರ್ಯ ।
ಕ್ಕೆಂದು ನೆರವೂರಿಂಗೆ ಹೋಗುತ ।
ತಂದೆ ತನ್ನಯ ಕಿರಿಯ ಮಗಳಂ ಕರೆದು ನೈದಡವಿ ।
ಮಂದಿರವ ಕಾಪಿರಿಸಿ ಮತ್ತಿಂ ।
ತೆಂದನೆಲ್ಲಿಗೆ ಮಸುಕದಿರು ಮನೆ ।
ಯಿಂದಗಲದಿರು ತರುವಲಿಗಳೊಡನಾದರು ತಾಯೇ ॥೨॥

ನಿರುತವಾದೆಮ್ಮ ವ್ರತವನಂ ।
ತರಿಸದೊಬ್ಬಳೆ ಹಾಲನಗಜಾ ।
ವರನಿವಾಸಕ್ಕೊಯ್ದು ಶಂಭುವಿಗುಣಬಡಿಸು ಕಂಡ ।
ಪರಿವಿಡಿಯದಿನ ವೇಳೆ ತಪ್ಪಿಸ ।
ದಿರು ಮರೆಯದಿರು ನೀನಲಸದಿರು ।
ತರಳೆ ನಿನ್ನಂ ಹೋದಪೆವಕ್ಕ ಚೆನ್ನಕ್ಕ ॥೩॥

ಓಲೆ ಚೌಕುಳಿ ಕಡಕು ಮೂಗುತಿ ।
ಕಾಲಕಡಗಂ ಬಣ್ಣಸರವುಂ ।
ತೋಳಬಂದಿಯನಿಪ್ಪ ಚಲ್ವಿನಂ ಬಾಲದೊಡಿಗೆಗಳ ।

ಬಾಲೆಯರು ಹಿಡಿದಾಡುವೊಳ್ಳೆಯ ।
ಕೀಲ ಬೊಂಬೆಯನದರುಡಿಗೆಯುಂ ।
ಬಾಲೆ ತಂಡಪೆವೆನುತ ಮನೆಯುಂದೊಪ್ಪಯಿಸಿ ಹೋಗೆ ॥೪॥

ಇಂತವರ ಕೊಡಗೂಸುವಾಗಳೆ ।
ದಂತಧಾವನಗೆಯ್ದು ಮಿಂದೊಲ ।
ವಾಂತು ದಣಿಬವನುಟ್ಟು ಭಸಿತವನಿಟ್ಟು ಭಾಳದಲಿ ।
ಕಾಂತೆ ಮಡಗಿದಜನ್ನಿಗೆಯ ಪಾ ।
ಲಂ ತೆಗೆದು ಚೆನ್ನಾಗಿ ಕಾಸಿದ ।
ನಂತರದೊಳಾ ತರಳೆಯೊಬ್ಬಳವಳೆದು ಬಟ್ಟಲಲಿ ॥೫॥

ಹಿಡಿದುಕೊಂಡು ಸೆರಗಿನಿಂದಿಂ ।
ಮಡಸಿ ಮುಚ್ಚಿಕಡಂಗಿ ಭೋರನೆ ।
ನಡೆದು ಹೊಕ್ಕಾದೇಗುಲದೊಳಿಪ್ಪಭವನಂ ಕಂಡು ।
ಪೊಡಮಡುತ್ತಂ ಬಟ್ಟಲಂ ಮುಂ।
ಗಡಿಯೊಳಿಟ್ಟಾರೋಗಿಸೈ ಯ ।
ನ್ನೊಡೆಯನೇ ಗುರುಕಲ್ಲಿನಾಥಾ ಎಂದು ಬಿನ್ನೈಸಿ ॥೬॥

ಬಂದಿನಿತು ಹಿಮ್ಮೆಟ್ಟಿ ಮರೆಯಲಿ ।
ನಿಂದು ಮತ್ತೈತಂದು ನೋಡಲು ।
ಮುಂದೆ ಬಟ್ಟಲು ತರಳೆ ತಾಂ ಮುನ್ನಿರಿಸಿದಂತಿರಲು ।
ಕುಂದಿ ಮನದೊಳು ತಾಪದಿಂ ತನು ।
ಕಂದಿ ಎಲೆ ನಾ ತಂದ ಪಾಲಂ।
ತಂದೆ ನೀನಾರೋಗಿಸದ ಕಾರಣವದೇನಯ್ಯ ॥೭॥

ಹಾಲು ಕಾಯವೋ ಪರಿಮಳಿಸವೋ ।
ಹಾಲು ಕಡುಬಿಸಿಯಾದವೋ ಚಿಲು ।
ಪಾಲವಲ್ಲವೊ ಒಡೆದವೋ ಆರೋಗಿಸುವದಿನ್ನು ।
ವೇಳೆಯಾಗದೋ ನಿನ್ನ ಮೊಸಲು ।
ಹಾಲು ಬೇಸರವಾಯಿತೋ ನಾಂ ।
ಬಾಲೆಯುಂದೊಲ್ಲೆಯೊ ತರಲ್ಯಾರಕ್ಕೆ ನೋಡಿದರೊ ॥೮॥

ಬಟ್ಟಲಂ ಬೆಳಗೆನೊ ಮಸವನಾ ।
ನಿಟ್ಟೆನೋ ಪಾಲಿಂಗೆ ಪಾಲ್ಕೆನೆ ।
ಗಟ್ಟಿವೋ ನೀರ್ವೆರಸಿದುವೊ ಆರೋಗಿಸುವ ಬುದ್ಧಿ ।
ಹುಟ್ಟಿದೋ ಸೀದಿತ್ತೊ ತುಪ್ಪವ ।
ನಟ್ಟಿನೆಂದೋ ಕುಡಿಯಲರಿಯೋ ।
ಹೊಟ್ಟೆಗೈದವೊ ಮಧುರವಿಲ್ಲವೊ ಹೊತ್ತು ಹೋಯಿತ್ತೋ ॥೯॥

ಬೇಕು ಬೇಡೆಂದುಸುರಲೊಲ್ಲೆಯ ।
ದೇಕೆ ಪಾಲಂ ಕುಡಿಯೆ ಕರೆಯಲು ।
ಮೂಕನೇ ಮಾರ್ನುಡಿವುವೇಂ ದಿಟವಾಗಿ ಹಸಿಯದೊಡೆ ॥
ಓಕರಿಸುತೊರ್ಕುಡಿತೆ ಗೊಂಡೊಡೆ ।
ಸಾಕು ಮಿಕ್ಕಿನ ಪಾಲನಿರಿಸು ಪಿ ।
ನಾಕಿ ತಹೆ ನಾಂ ಉಂಬೊಡೊಟ್ಟೋಗರವನೊಂದಿನಿತು ॥೧೦॥

ಮನೆಯ ಬೋನದ ಭಾಜನದೊಳಿನಿ ।
ದೆನಿಪ ಹೂರಿಗೆ ಗಾರಿಗೆಗಳಂ ।
ನಿನಗೆ ಮೆಲುವಡೆ ತಂದು ಕೊಡುವೆನು ಕಳುಹು ನೀನೆನ್ನ ॥
ಮನಕೆ ಬಂದಡೆ ತುಪ್ಪವದೆ ನೆಲು ।
ಹಿನ ಗಡಿಗೆಯಲಿ ಮಡಗಿ ಬೇಕಾ ।
ದನಿತನಾದೊಡೆ ತಂದಪೆಂ ನಿನ್ನಿಷ್ಟವೇಂ ಪೇಳು ॥೧೧॥

ಹರವಿಯಲಿ ಬೈಚಿಟ್ಟ ಪೊಸ ಸ ।
ಕ್ಕರೆಯ ನೊಲದೊಡೆ ಹೋಗಿ ತಹೆನೇ ।
ಗುರುಮಠದೊಳಿಮ್ಮಯಗಳ ಪರ್ವಕ್ಕೆ ನಾಳಿರ್ದು ॥
ಕರೆಯಬಹೆ ನಾಂ ನಿನ್ನ ನಾಯುವ ।
ಸರಕೆ ತೇರಸ ವೀರಷೋಡಶ ।
ವರಗಣಾರ್ಚನೆ ಗೈದಿ ನೋಡುವೆವವಧರಿಸು ಪಾಲ ॥೧೨॥

ಎನ್ನ ಶಿವ ಸೋದರಿಯ ಮಠದಲಿ ।
ತನ್ನ ಪಾಯಸವುಂಟು ಬೇಕೆಂ ।
ದೆನ್ನ ನಿನಗಾನೈದಿ ತಂದಪೆನೆಲೆ ಮಹಾದೇವ ॥

ಮುನ್ನ ನೀನಿಪಾಲನೀಂಟ್ಟೈ ।
ನಿನ್ನ ಮೆಚ್ಚಿನ ಹೆಸರ ಹುಗ್ಗಿಯ ।
ದನ್ನಿರೂಪಿಸು ಮಹಮನೆಯೊಳದೆ ಕೊಡುವೆನ್ನೈ ತಂದು ॥೧೩॥

ವೀರಭದ್ರನ ಹಲಗೆ ಮೆರೆವುದು ।
ವೀರಭಕ್ತರತಿಂಥಿಣಿಯೊಳತಿ ।
ವೀರಮಂ ತೋರಿದವೆನೇಳಾರೋಗಿಸೈ ಪಾಲ ॥
ಕ್ಷೀರದೊಳಯಿಂ ಕವಲನಾದೊಡೆ ।
ತಾರನೇ ಬೇಕೆಂದೊಡಂ ಶಿಶು ।
ಹಾರಿಯಿವಳೆಂದೆನ್ನದಿರು ನಾ ಉಸುರುವೊಂದಾಗಿ ॥೧೪॥

ಚಿಗುಳಿ ಚಕ್ಕುಲಿ ಹಾಲವುಗ ಮಂ ।
ಡಿಗೆ ತರಗುವಿಡ್ಡಲಿಗೆಯುಂ ಲ ।
ಡ್ಡುಗೆ ಕಳವೆಯವಲಾದಿಯಾದ ಪುಲವು ಫಲಂಗಳನು ॥
ನಿಗಳ ವುಂಗುರ ಗೆಜ್ಜೆ ಪೊನ್ನಂ ।
ದುಗೆ ಪವಳಮುಂ ಮುತ್ತು ಪೊಚ್ಚ ಕಿ ।
ರಿಗೆ ರವಕೆಯುಂ ಬೊಂಬೆದೊಟ್ಟಿಲು ಮೊದಲಿವೆಲ್ಲವನು ॥೧೫॥

ತಂದು ಕೊಡುವಾರು ನಾಳಿಗೆಮ್ಮಯ ।
ತೆಂದೆತಾಯಿಗಳೆನಗಿವೆಲ್ಲವ ।
ತಂದುಕೊಡುವೆನು ನಾ ನಿನಗೆ ಹುಸಿಯಲ್ಲ ನಿನ್ನಾಣೆ ॥
ಮುಂದೆ ಬಟ್ಟಲೊಳಿರ್ದಪಾಲಂ ।
ಛಂದವಳಿಯದಮುನ್ನ ಕುಡಿಯೈ ।
ಇಂದುಧರ ಎನ್ನೊಡನೆ ನುಡಿಯದೆ ಕಾಡಲೇಕೆನುತ ॥೧೬॥

ಹಸುಳೆ ಹೊಡಮಡುತಡಿಗಡಿಗೆಕೋ ।
ಪಿಸುಗು ಸಂತಾಪಿಸುಗಳುಗುಗಂ ।
ಪಿಸುಗು ವ್ಯಡನೊಡನೆರಡುಕೈಯಂ ಜಡಜಡಿದು ಬಿದಿಗು ॥
ಹುಲಿದು ಬಳಕುತ ತಟತಟನೆ ತಾ ।
ಟಿಸುಗಡಿಗಳಂ ಪೊಡವಿಯೊಳು ಹೊಸ ।
ಹೊಸದು ಕೊಳಗಂತಸಿಯ ಬಸುರಂ ಬಸವಳಿಗು ಸುಯ್ಯು ॥೧೭॥

ಬಟ್ಟಲವ ನೋಡುಗುಮಭವನಂ ।
ದಿಟ್ಟಿಸುಗು ನೆರೆ ನಂಬಿಸುಗು ಮರ ।
ವಟ್ಟು ನಿರ್ಜೀವಿಯು ತೆರದೊಳಿರ್ದಂತಿರುತ್ತಳುಗು ॥
ದಟ್ಟಿಸುಗು ದೊಪ್ಪನೆ ಕೆಡಗು ಧನಿ ।
ಗೊಟ್ಟು ಕರೆದುಕರಂಮುಗಿದುಪೊಡ ।
ಮಟ್ಟು ಗಿಣ್ಣಿಲನಂತು ನೂಕುಗು ಮತ್ತೆ ಮುಂದಿಡು ॥೧೮॥

ಮೃಡನಡಿಗೆ ಪೊಡಮಡುಗು ಪಾಲಂ ।
ಕುಡಿಯದಿರ್ದೊಡೆ ನೋಡಿ ಕಡು ಸಿಡಿ ।
ಮಿಡಿಗೊಳುತ್ತುರಂತೆ ಚಿಂತಿಸುತಿರ್ಕು ಕೊಡಗೂಸು ॥
ಬಡಮುಗುವು ನಾನೆಂದು ಕಾಡುವ ।
ಒಡೆಯ ನಿಮ್ಮುವ ನೇನನೆಂಬೆನು ।
ಕಡೆಗೆ ಆರೋಗಿಸಿದಡಲ್ಲದೆ ಬಿಡೆನು ನಿಮ್ಮಾಣೆ ॥೧೯॥

ಹಾಲನೀಗಳೆ ಕುಡಿಯುದಿರ್ದೊಡೆ ।
ಕೇಳಿ ಎಮ್ಮವರೆನ್ನನಾಗಳೆ ।
ಬೀಳಸದೆದಸುವಂ ಕಳೆವರವರಿಂದಲಿಂದೆನಗೆ ॥
ಮೇಲದೆಂತುಂ ಸಾವು ತಪ್ಪದು ।
ಶೂಲಿ ಚಿತ್ತೈಸಯ್ಯ ಹಿಂದಕೆ ।
ಕಾಲನಿಕ್ಕುವಳಲ್ಲವಿಲ್ಲಿಯೆ ಸತ್ತು ಸರಿಯಹೆನು ॥೨೦॥

ಎಂದು ಶಿವನೊಳು ತನ್ನ ತಲೆಯಂ ।
ನಿಂದು ತಾಟಿಸಿ ಕೊಳುವನಿತರಲಿ ।
ನಂದನೆಯನಾಗಳೆ ಹಿಡಿದು ದರಹಸಿತಮುಖನಾಗಿ ॥
ಇಂದುಮೌಳಿ ದಯಾಳು ಭಕ್ತಾ ।
ನಂದಕರನಘವೈರಿ ಬಾಲಕಿ ।
ತಂದ ಬಟ್ಟಲ ಹಾಲನೀಂಟಲು [ತತ್ತರುಣಿ[1]] ನಗುತ ॥೨೧॥

ಕಿರಿಯಳಿವಳೆಂದೆನ್ನುವಂ ನೀಂ ।
ಬರಿದೆ ಕಾಡದಿರೆನ್ನ ಬೊಪ್ಪಂ ।
ಗರುಹಿಯೆಲ್ಲಾ ನಿನಗೆ ಎನಗಂಮತ್ತೆ ಸಂವಾದ ॥

೧ ಆ ತರುಳೆ.

ಮರೆಯದಿರು[ಕ*ದೆಕಂಠ] ಎನುತಿಂ ।
ತೊರಲಿ ಬಟ್ಟಲ ನೀಸಿಕೊಂಡೆ ।
ಚ್ಚರಿಸಿ ನಿಚ್ಚಂ ಹಾಲನೀಯಲು ಶಿವನವಧರಿಸಲು ॥೨೨॥

ಈ ಪ್ರಕಾರದಿ ಮನೆಗೆ ಹೋಗಿ ದಿ ।
ನಪ್ರತಿಯೊಳಾ ಬಾಲೆಯತ್ಯಂ ।
ತಪ್ರಯತ್ನದಿ ಜನ್ನಿಗೆಯ ಪಾಲಂ ಕರೆದು ಕಾಸಿ ।
ಕ್ಷಿಪ್ರದಿಂದಂ ತಂದು ಕೊಡಲಂ ।
ಬಾಪ್ರವರನುಂ ಕೊಳತಿರಲು ಚಿ ।
ತ್ತಪ್ರಿಯದೊಳಾ ಬರಿಯ ಬಟ್ಟಲನಬಲೆ ಹಿಡಿತರಲು ॥೨೩॥

ಅತ್ತಲೂರಿಗೆ ಹೋದವರು ತಾ ।
ವಿತ್ತ ಮನಗೈ ತರುತಲಿದಿರೊಳು ।.
(‡ತತ್ತರುಣಿಯಂ) ಕಂಡು ಪಿತನಿಂತೆಂದನಾಗ್ರಹಿಸಿ ॥
ಎತ್ತಲೈದಿದೆ ಪಾಲಮತ್ತಾ ॥
ಗಿ್ತ್ತೆ ತರುವಲಿ ಬರಿಯ ಬಟ್ಟಲ ।
ನೆತ್ತಿ ಕೊಂಡೆಲ್ಲಿರ್ದು ಬಂದಪೆ ಹೇಳು ಹೇಳೆನಲು ॥೨೪॥

ನೀವು ಹೇಳಿದ ಹಾಗೆ ಮನೆಯಿಂ ।
ದಾವಗಂ ತಂದಣ್ಣೆವಾಲಂ ।
ತೀವಿ ಬಟ್ಟಲೊಳೊಬ್ಬಳವನಿಂತಳೆದು ಕೊಂಡೊಯ್ದು ॥
ಈವೆನೀಯಲೊಡಂ ಮೃಡಂ ಕಲಿ ।
ದೇವನಾರೋಗಿಸೆ ನಮಿಸಿಯಾ ।
ನೋವಿ ಗಿಣ್ಣಲನೀಸಿಕೊಂಡ್ಯೆತಪ್ಪೆ ನಾನೆನಲು ॥೨೫॥

ಕ್ಷೀರವಂ ಸೇವಿಸುವ ನೇಮದ ।
ನಾರಿಯೆಂದುಂ ಕಾಳು ನುಡಿದೇ ವಿ ।
ಕಾರಿ ತರುವಲಿ ನೀನೆ ಕುಡಿದೆಯೊ ನಿನ್ನ ಸಂಗಡದ ॥
ಓರಿಗೆಯ ಮಕ್ಕಳಿಗೆ ಕೊಟ್ಟೆಯೊ ।
ಆರುಕೊಂಡರು ಹೇಳು ನಡೆಯುತ ।
ದಾರೆಯಲಿ ಕೆಡಹಿದೆಯೊ ನೈಮರೆದೆಲ್ಲಿ ಚಲ್ಲಿದೆಯೊ ॥೨೬॥

* ಕರಿಗೊರಲ, ಸಿತಕಂಠ
‡ ಮತ್ತೆ ತರುಳೆಯ

ಅಸಮ ಮಾಹೇಶ್ವರರು ಯುದ್ದೇ ।
ಶಿಸಿ ಮಹಾಶಿವಲಿಂಗವಾರೋ ।
ಗಿಸಿ ಯೆನುತ್ತತಿಭಕ್ತಿಯಿಂ ಪ್ರಾರ್ಥಿಸುತ ವಂದಿಸಲು ॥
ಒಸೆದು ತಾನಿಂತಭವನಾರೋ ।
ಗಿಸುವದದು ದುರ್ಲಭವೆನಲ್ಕೀ ।
ಹಸುಳೆಯಿಂದಾರೋಗಿಪನೆ ಯಿದು ಹುಸಿಯೆನುತ ಬೈದು ॥೧೭॥

ನಾವಿದಂ ನೋಡುವೆವೆನುತ ಶಿವ ।
ದೇವನಾ ಮರುದಿವಸವಬಲೆಯು ।
ನಾವಿಧದೊಳೊಬ್ಬಳವಳದು ಪಾಲ್ಬಟ್ಟಲಂ ಕೊಟ್ಟು ॥
ದೇವನಿಲಯಕೆ ಕಳುಪುತಂ ಮೇ ।
ಣಾತ್ಮವು ಹಿಂದೆ ತನೂಜೆ ಮುಂದೆಯು ।
ಮಾವರನ ಸಮ್ಮುಖಕೆ ನಡೆತಂದಾಗ ನೋಡಲ್ಕೆ ॥೧೮॥

ಕೊಟ್ಟಪಾಲಂ ಕಲ್ಲಿನಾಥಂ ।
ಮುಟ್ಟದಾದನದೇಕೆ ಬಾಲೆಯು ।
ಘಟ್ಟಯುಹಮುಗ್ಧಸ್ವಭಾವವನಚಳಭಕ್ತಿಯನು ॥
ನೆಟ್ಟನೀ ಲೋಕಕ್ಕೆ ತೋರ ।
ಲ್ಪಟ್ಟರಲು ಬಗೆದನಿತರೊಳು ಕ ।
ಣ್ಬಟ್ಟು ನೋಡುತ್ತಾಗ್ರಹಿಸುತಂ ತಂದೆಯಿಂತೆಂದ ॥೧೯॥

ಎಲಗೆ ತರುವಲಿ ಮೂಲಪಾಲಂ ।
ಸಲೆಯು ಭವನಿಂದೇಕೆ ಯೊಲ್ಲನು ।
ಹಲವು ಗಳಹದೆ ಮುಟ್ಟದನೆ ಪಾಲ್ಗೂಸಿ ನೋಡಿವನೆ ॥
ಮಲಹರಂಗುಣ್ಣಿಸದೆ ಪಾಲಂ ।
ನಲಿದು ನಿಚ್ಚಂ ಕುಡಿದ ಪಾತಕಿ ।
ತಲೆಯನಟ್ಟಿಯೊಳಿಟ್ಟು ಬಿಸುಡದೆ ಮಾಣ್ಬೆನೇನಿನ್ನಾ ॥೨೦॥

ಎನ್ನ ಬಾಧೆಯೊಳೆಂತು ಬದುಕುವೆ ।
ಛಿನ್ನ ಛಿನ್ನಂ ಮಾಡುವೆನು ನಾ ।
ನಿನ್ನನೆನುತತಿಕೋಪದಿಂದರೆಯಟ್ಟೆ ಬರೆ ಮುನ್ನ ॥

ಕನ್ನೆಯೊರಲುತ ಹಾ ಶಿವಾ ಹಾ ।
ಪನ್ನಗಾಧಿಪ ಹಾಹರಾ ಯನ ।
ಗಿನ್ನು ಗತಿ ನೀನೊರ್ಬನೆನುತಂ ಸಾರ್ದಿರಲು ಮುಂದೆ ॥೩೧॥

ಕೆಯ್ಯ ಬಟ್ಟಲ ಹಾಲಿಗಂತಾಂ ।
ಕೆಯ್ಯನೀಡುತ್ತೀಂಟೆ ಬಾಲಕಿ ।
ಯಯ್ಯನಂ ಬಿಟ್ಟೋಡಲೋಹೋ ಅಂಜಬೇಡೆನುತ ॥
ಮೆಯ್ಯನೊರಸುತ್ತಪ್ಪಿ ಯಭಯದ ।
ಕೆಯ್ಯನೀಡುತ್ತುದರವಬಗಿ ।
ದೊಯ್ಯನೊಯ್ಯನೆ† [ತತ್ತರುಣಿ] ಯಂ ಪುಗಿಸುತಿರಲೊಡನೆ ॥೩೨॥

ಆಹೊಗುವಳುಂ ಹೊಗುವಳದೆ ಯಿದೆ ।
ಹೋಹಳೆಂದತಿಶೀಘ್ರದಲಿ ನಿ।
ರ್ರ್ಮೋಹದಿಂ ಪಿತನೈದಿ ಚಂಡಿಕೆಯಂ ಪಿಡಿದುಕೊಳಲು ॥
ಆಹಶಿಖಿ ಹೊರಗುಳಿದುದಬಲೆಯ ।
ದೇಹವಾಲಿಂಗದೊಳೆ ಶಿಲ್ಕಿದು ।
ದೀ ಹದನನರಿದೆಲ್ಲರುಂ ಗುಡಿಕಟ್ಟಿ ಕೊಂಡಾಡೆ ॥೩೩॥

ಪ್ರಕಟವಿದು ಮುಂಗೈಯ ಕಡಗಕೆ ।
ಮುಕುರವೇತಕೆ ಬೆಳವುತಿಹ ಚಂ ।
ಡಿಕೆಯ ಕೂದಲನಾರುತಿಂಗಳಿಗೊಮ್ಮೆ ಕತ್ತರಿಸೆ ॥
ಆಕುಟಿಲಸ್ಫುಟಮುಗ್ಧಭಕ್ತಿಗೆ ।
ಸುಕರವೆನೆ ಕೊಡಗೂಸು ನೆಗಳಿದ ।
ಸುಕಥೆಯಂ ಕೇಳ್ದವರಿಗಭಿಮತಸೌಖ್ಯವೊಂದುವುದು ॥೩೪॥

† ಯಾ ತರುಳೆ—ಪಾಠಾಂತರ

೩. ಕನ್ನಡ ಭಾರತ.

ದ್ರೌಪದೀ ಸ್ವಯಂವರ

ಸೂಚನೆ॥ ರಾಯಸಭೆ ನಗಲೈದಿ ಯಂತ್ರದ ।
ದಾಯವನು ನೆರೆ ಗೆಲಿದು ನಿರ್ಜರ ।
ರಾಯನಂದನ ಕಾದಿ ಗೆಲಿದನು ಸಕಲರಿಪುನೃಪರ ॥

ಕೇಳು ಜನಮೇಜಯಧರಿತ್ರೀ ।
ಪಾಲ ಪಾಂಚಾಲಿಯ ಮನೋರಥ ।
ಶಾಲೆಯಲಿ ಸಾರಿದರೆಲೈ ಸಭೆಯಲಿ ಮಹೀಸುರರ ॥
ಏಳಿ ಭುಜಬಲವುಳ್ಳವರು ವಿ ।
ಪ್ರಾಳಿಯಲಿ ಬಿಲುವಿಡಿದು ಯಂತ್ರದಿ ।
ಕೋಲುಗಳ ಕೇವಣಿಪುದೆಂದರು ಹೊಯ್ದು ಡಂಗುರವ ॥೧॥

ಎಂದು ಸಾರಿದ ದನಿಯನಾದ್ವಿಜ ।
ವೃಂದವಾಲಿಸಿ ನಮಗಿದೇಕರ ।
ಸಿಂದವವನೆಯ ತೊಡಕು ತೆಗೆ ನಾವಾರು ಧನುವಾರು ॥
ಬಂದ ದಕ್ಷಿಣೆ ಮಿಷ್ಟಭೋಜನ ।
ದಿಂದ ತುಷ್ಟರು ನಾವು ನಮಗಿದ ।
ರಿಂದ ಬಹು ದುಷ್ಕೀರ್ತಿ ಬರಲೆಂದುದು ಬುಧವ್ರಾತ ॥೨॥

ವಚನಶೂರರು ನಾವು ಪಾರ್ಥಿವ ।
ನಿಚಯವೇ ಭುಜಶೂರರನಿಬರ ।
ಸಚಲಧನು ಭಂಗಿಸಿತು ನಮಗೀ ವಿದ್ಯೆ ವೈದಿಕವೇ ॥
ಉಚಿತವಲ್ಲಿದು ನಮ್ಮ ಸಾಹಸ ।
ರಚನೆಯನು ನೋಡುವೊಡೆ ಪಂಡಿತ ।
ನಿಚಯವಿದಿರಲಿ ನಿಲಲಿ ತೋರುವೆವಲ್ಲಿ ವಿಸ್ಮಯವ ॥೩॥

ಭರತದಲಿ ವೈದ್ಯದಲಿ ಕಾವ್ಯಸು ।
ವಿರಚಿತಾಲಂಕಾರದಲಿ ಗಜ ।
ತುರಗಲಕ್ಷಣದಲಿ ಸಮಾಹಿತಮಂತ್ರತಂತ್ರದಲಿ ॥

ಸರಸಕವಿತಾರಚನೆಯಲಿ ವಿ ।
ಸ್ತರದುಪನ್ಯಾಸದಲಿ ಭೂಪತಿ ।
ಕರೆಸಿ ನೋಡಲಿ ನಮ್ಮನೆಂದರು ದ್ವಿಜರು ತಮತಮಗೆ ॥೪॥

ಅಲ್ಲದಿರ್ದರೆ ಸೋದಿಸಿದ ತನಿ ।
ಬೆಲ್ಲವಿಕ್ಕಿದ ಹೂರಿಗೆಯ ಮೆದೆ ।
ಯಲ್ಲಿ ಪರಡಿಯ ಸೇವಿಗೆಯ ಪರಿಪರಿಯ ಪಾಯಸದ ॥
ಪುಲ್ಲಿಗೆಯ ತತ್ಸವಿಯ ಮಂಡಿಗೆ ।
ಯಲ್ಲಿ ನವಘೃತಸೂಪದಂಶಕ ।
ದಲ್ಲಿ ನೋಡಲಿ ನಮ್ಮನೆಂದುದು ಧೂರ್ತವಟುನಿಕರ ॥೫॥

ರಸದ ಹೊರಲೇಪದಲಿ ಹುದುಗಿದ ।
ಮಿಸುನಿಯಂತಿರೆ ಜೀವಭಾವ ।
ಪ್ರಸರದೊಳಗವಲಂಬಿಸಿದ ಪರಮಾತ್ಮನಂದದಲಿ ।
ಎಸೆವ ವಿಪ್ರಾಕಾರದಲಿ ರಂ ।
ಜಿಸುವ ಭೂಪತಿ ತತ್ಸಭಾಸ ।
ದ್ವಿಸರಮಧ್ಯದೊಳಿರ್ದು ಕೇಳಿದನೀ ಮಹಾಧ್ವನಿಯ ॥೬॥

ನೋಡಿದನು ತಮ್ಮನನು ಸನ್ನೆಯ ।
ಮಾಡಿದೊಡೆ ಕೈಕೊಂಡನವನಿಪ ।
ಗೂಡಿ ಕುಂತಿಗೆ ಭೀಮಸೇನಂಗೆರಗಿ ಮನದೊಳಗೆ ॥
ಕೂಡೆ ಕುಳ್ಳಿರ್ದಖಿಲವಿಪ್ರರ ।
ನೋಡಿಮೆಲ್ಲನೆ ಧೋತ್ರ ದರ್ಭೆಯ ।
ಗೂಢ ಸಂವರಿಸುತ್ತ ಸಭೆಯಿಂದೆದ್ದನಾ ಪಾರ್ಥ ॥೭॥

ಏನು ಸಿದ್ಧಿಯುಪಾಧ್ಯರೆದ್ದಿರಿ ।
ದೇನು ಧನುವಿಂಗಲ್ಲಲೇ ತಾ ।
ನೇನು ಮನವಂಘವಣೆ ಬಯಸಿದಿರೇನು ಕಾಮಿನಿಯ ॥
ವೈನತೇಯನ ವಿಗಡಿಸಿದ ವಿಷ ।
ವೇನು ಸದರವೊ ಹಾವಡಿಗರಿಗಿ ।
ದೇನು ನಿಮ್ಮುತ್ಸಾಹವೆಂದುದು ಧೂರ್ತವಟುನಿಕರ ॥೮॥

ನುದುವೆ ಬೇಕೇ ಶ್ರೋತ್ರಿಯಸ್ತೋ ।
ಮದಲಿ ಕನ್ಯಾರ್ಥಿಗಳು ನಾವೆಂ ।
ಬುದು ನಿಜಾನ್ವಯವಿದ್ಯೆಯಲಿ ಕೊಡುವುದು ಪರೀಕ್ಷೆಗಳ ॥
ಮದುವೆಯಹುದಿದು ಸೌಖ್ಯಪುಣ್ಯ ।
ಪ್ರದವು ಭೂದೇವರಿಗೆ ನೀಂ ನೆನೆ ।
ದುದು ಭಗೀರಥಯತ್ನವೆಂದುದು ಭೂಸುರವ್ರಾತ ॥೯॥

ನೀವು ಸ್ವೈರಿಸಿ ನಿಮ್ಮ ಕಾರು ।
ಣ್ಯಾವಲೋಕನಮುಂಟಲೇ ಸ ।
ದ್ಭಾವದಲಿ ನೀಂ ರಚಿಸಿದಾಶೀರ್ವಾದಶಕ್ತಿಯಲಿ ॥
ನಾವು ವಿಜಯರು ಚಾಪಯಂತ್ರವಿ ।
ದಾವ ಘನವೆಂದರ್ಜುನನ ಸಂ ।
ಭಾವನೋಕ್ತಿಗೆ ನಿಲ್ಲದವರೊದರಿದರು ತನುತನುಗೆ ॥೧೦॥

ಕೆಲರು ಹೋಗದಿರೆಂದು ಜರೆದರು ।
ಕೆಲರು ತಾನೇ ಬಲ್ಲನೆಂದರು ।
ಕೆಲರು ನುಡಿದರು ವಿಪ್ರಸಭೆಗಪಹಾಸ್ಯವಹುದೆಂದು ॥
ಕೆಲರು ತಪ್ಪೇನೆಂದು ಕಳೆದರು ।
ಕೆಲರು ಭದ್ರಾಕಾರನೀತಂ ।
ಗಳುಕುವುದು ಧನು ಭಾಗ್ಯಮುಖನೆಂದುದು ಬುಧಸ್ತೋಮ ॥೧೧॥

ತೊಟ್ಟ ಹೊಸಯಜ್ಞೋಪವೀತದ ।
ಮುಟ್ಟೆ ನೊಸಲಲಿ ಕುಸೆಯ ಕರಡಿಗೆ ।
ಕಟ್ಟಿಯಿರುಕಿದ ಕಕ್ಷೆ ಬೆರಳಲಿ ಮುರಿದ ದರ್ಭೆಗಳ ॥
ಉಟ್ಟ ಬಾಸರ ಬಳಲಗಚ್ಚೆಯ ।
ಅಟ್ಟಹಾಸದ ಜನದ ನಗೆಗಳ ।
ನಟ್ಟವಿಗನೋಸರಿಸಿ ಸಭೆಯಲಿ ಮೆಲ್ಲನೈತಂದ ॥೧೨॥

ಧನು ತನಗೆ ನೆಗಹಲ್ಕೆ ಕೃಷ್ಣಾ ।
ಜಿನವೊ ಸಾಲಗ್ರಾಮದೇವರೊ ।
ವಿನುತ ತುಳಸಿಯೊ ಕುಶವೊ ದರ್ಭೆಯೊ ಸಮಿದೆಗಳ ಹೊರೆಯೊ ॥

ನೆನೆದ ತಿಲವೋ ಮೇಣಿದೌಪಾ ।
ಸನದ ಕೊಳವಿಯೊ ಬಣಗುವಿಪ್ರನ ।
ನೆನಹ ನೋಡಿರೆ ಘನವಲಾ ದ್ರೌಪದಿಯ ಸೌಭಾಗ್ಯ ||೧೩

ಇತ್ತನೋಡೌ ತಾಯೆ ಹಾರುವ ।
ರತ್ತ ಗಡ್ಡದುಪಾಧ್ಯರನು ತಾ ।
ವೆತ್ತುಪರು ಗಡ ಧನುವ ನಿಸುವರು ಗಡ ತಿಮಿಂಗಿಲವ ॥
ಹೊತ್ತುಗಳೆವೊಡೆ ಲೇಸು ಬಳಿಕೆ ।
ನ್ನುತ್ತಮರಲಾ ವಿಪ್ರರೆನೆ ತಲೆ ।
ಗುತ್ತಿ ನಾಚಿದಳುಂಗುಟದೊಳೌಂಕುತ ಮಹೀತಳವ ||೧೪||

ಅವನಿಪತಿ ಕೇಳಿತ್ತಲೀ ಪಾ ।
ರ್ಥಿವರ ಪರಿಹಾಸವನು ಕಾಂತಾ ।
ನಿವಹದಲಿ ನಿಬ್ಬರದ ನುಡಿಗಳನಾ ಮಹೀಸುರರ ॥
ವಿವಿಧಕಟುಮಧುರೋಕ್ತಿವಿನ್ಯಾ ।
ಸವನು ಕೇಳುತ ಮುಗುಳು ನಗೆಯಲಿ ।
ನವಮದದ್ವಿಪಗತಿಯ ಗರುವಾಯಿಯಲಿ ನಡೆತಂನ ||೧೫||

ಹೊಯ್ದು ತಿರುವನು ಸೆಳೆದು ಕಿವಿವರೆ ।
ಗೊಯ್ದನಿದು ಹದವಿಲ್ಲಲಾ ಬಲು ।
ಹಾಯ್ದುದಕಟಾ ಬರಿದೆ ಹೆದರಿತು ಮಾಗಧಾದಿಗಳು ॥
ಕಯ್ದುಗೆದರಿದರೊರಳ ಹೆಸರೆನ ।
ಗೆಯ್ದಬೇಕೆಂದ್ಯೆಸಲೇ ಎನು ।
ತಯ್ದುಬಾಣವ ಕೊಂಡು ಯಂತ್ರದ ಹೊಳವ ನೀಕ್ಷಿಸಿದ ||೧೬||

ತೂಗಿ ಕಿವಿವರೆಗುಗಿದು ಯಂತ್ರವ ।
ತಾಗಿಸಿದನಂಬಿನಲಿ ಪಾರ್ಥನ ।
ಲಾಗುವೇಗವನಾರು ಬಲ್ಲರು ಯಂತ್ರಭೇದದಲಿ ।
ಜಾಗು ! ಧಣು ! ಧಣು ! ಪ್ರೂತು ! ಕಾರ್ಮುಕ ।
ಯೋಗಸಿದ್ಧನೆ ! ಮಝುರೆ ! ಕೋದಂ ।
ಡಾಗಮತ್ರಿಪುರಾರಿಯೆಂದುದು ವಂದಿಸಂದೋಹ ||೧೭||

ಆಯೆನುತ ಬೊಬ್ಬಿರಿದು ವಿಪ್ರನಿ ।
ಕಾಯ ಕುಣಿದುದು ಕಮಲಮುಖಿ ನಿ ।
ದಾರ್ಯದಲಿ ಸೇರಿದಳು ಹಾರುವಗೆನುತ ಹರ್ಷದಲಿ ॥
ಆಯುವತಿ ಜನಜಲಧಿ ಮಸಗಿತು ।
ಬಾಯ ಮೌನದ ಬೆರಳ ಮೂಗಿನ ।
ರಾಯರಿದ್ದರು ಬಿಗಿದ ಬೆರಗಿನ ಹೊತ್ತು ದುಗುಡವಲಿ ॥೧೮॥

ಮೊಳಗಿದುವು ನಿಸ್ಸಾಳತತಿ ಹೆ ।
ಕ್ಕಳದ ಪೆರ್ಚಿನೊಳಲ್ಲ ದಿವಿಜಾ ।
ವಳಿಯ ದುಂದುಭಿರವದಲುಬ್ಬಿದ ಸಾಧುವಾದಗಳು ॥
ನಳಿನಮುಖಿ ದಂಡಿಗೆಯೊಳೈತಂ ।
ದಿಳಿದಳೀತನ ಹೊರೆಯೊಳಾಗಳೆ ।
ಕಳಕಳದೊಳೊಳತೋಟಿ ಮಸಗಿತು ಹರುಷಲಜ್ಜೆಯಲಿ ॥೧೯॥

ಲಲಿತಮಧುರಾಪಾಂಗದಲಿ ಮು ।
ಕ್ಕಳಿಸಿ ತಣಿಯವು ಕಂಗಳುಬ್ಬಿದ ।
ಪುಳಕಜಲವಲಿ ಮುಳಿಗಿ ಮೂಡಿತು ವೈ ನಿತಂಬಿನಿಯ ॥
ತರುಣಿ ನಿಜ ತನುಪರಿಮಳದೊಳುರೆ ।
ಹೊರೆದ ಹೂವಿನ ದಂಡೆಯನು ನಿಜ ।
ವರನ ಕೊರಳಲಿ ಹಾಕಿದಳು ಜಯವೆನೆ ಸುರಸ್ತೋಮ ॥೨೦॥

೪. ತೊರವೆಯ ರಾಮಾಯಣ

ಶ್ರೀರಾಮವನವಾಸಪ್ರಯತ್ನ

ಕುಶನೆ ಕೇಳ್ ಪಟ್ಟಾಭಿಷೇಕದ ।
ವಸತಿ ಶೃಂಗಾರಿಸಿತು ನೆರೆದುವು ।
ಹೊಸಪರಿಯ ನೃಪಲಾಂಛನಾದಿಸಮಸ್ತವಸ್ತುಚಯ ॥
ಒಸಗೆ ತತ್ಪುರವರವನವಲಂ ।
ಬಿಸಿತು ನಿಮಿಷದಲಾಸುಮಂತ್ರನ ।
ದಶರಥನ ಬಳಿಗಟ್ಟಿ ರಾಮನ ಬಳಿಗೆ ಮುನಿಬಂದ ॥೧॥

ನಿಮ್ಮ ಕರುಣ ಕಟಾಕ್ಷರಕ್ಷಣೆ ।
ಯೆಮ್ಮ ಮೇಲಿರಲಾವದುರ್ಘಟ ।
ವೆಮ್ಮ ಮಾಡುವುದೇನು ನಾಂ ನಿರ್ದೈವರೇ ಎನುತ ।
ಬೊಮ್ಮಕೋಟಿಕಿರೀಟಮಂಡಿತ ।
ನಿರ್ಮಳಾಂಘ್ರಿನಖಪ್ರಭಾಕರ ।
ನುಮ್ಮಹದೊಳೆರಗಿದನು ನರರವೊಲಾ ಮುನೀಂದ್ರಂಗೆ ॥೨॥

ಕ್ಷಿತಿಯ ವಿಬುಧರ ವಿಮಲಮಂತ್ರಾ ।
ಕ್ಷತೆಯ ಕೈಕೊಳುತಡರಿದನು ನಿಜ ।
ಸತಿಸಹಿತ ಹೊಂಗದ್ದುಗೆಯ ಹೊಂಬೆಸೆದ ರೆಂಚೆಯದ ॥
ರತುನ ಲಹರಿಯುಲಳಿಯ ಭದ್ರಾ ।
ಯತನಮತಂಗಜಕಂಧರದಿ ಮುನಿ ।
ಪತಿಯನಾಜ್ಞೆಯಲಖಿಳತೂರ್ಯತ್ರಯವ ರಭಸದಲಿ ॥೩॥

ಬಳಸಿದುದು ನರಪಾಲತತಿ ಹೆ ।
ಕ್ಕಳಿಸಿದುದು ಚತುರಂಗಬಲವೆಡ ।
ಬಲದಲುಗ್ಗಡಿಸಿದರು ಕೈವಾರಿಗಳು ಬಿರುದುಗಳ ॥

ನಿಳಯ ನಿಳಯದ ನಳಿನಮುಖಿಯರ ।
ಹೊಳೆವ ರತ್ನಾವಳಿಯ ದೀಪಾ ।
ವಳಿಯ ಸಂಭ್ರಮದಿಂದ ಬಂದನು ರಾಜಬೀದಿಯಲಿ ॥೪॥

ಕದಡಿದಂತಃಕರಣಗಳ ಗದ ।
ಗದಿತಕಂಠದ ಕಂಬನಿಯಲಿ ।
ದ್ದುದು ಸಮಸ್ತ ಚಮೂಪಸಚಿವನಿಯೋಗಿಬಂಧುಜನ ॥
ಇದಿರುವಂದು ಸುಮಂತ್ರನಿಳಿಗಿಳು ।
ಹಿದನು ಮುದಕರಿಯಿಂದ ಮುರುವಿನ ।
ಮುದದ ಹೊಳೆವಶ್ರುಗಳ ಸಂತಾಪದಲಿ ರಘುಪತಿಯ ॥೫॥

ತಿವರಿದೊಡ್ಡೆಯ ಹೊಗಿಸಬೇಡುಳಿ ।
ದವರನೆಂದೊಳಹೊಗುತ ನೇಮುವ ।
ನವಸರದ ಸೇವಕರಿಗಿತ್ತು ವಸಿಷ್ಠ ಮುನಿಸಹಿತ ॥
ಅವನಿತನುಜಾಪತಿಗೆ ಕೈಗೊ ।
ಟ್ಟವನಿಪನ ಬಳಿಗಾಗಿ ಕೈಕೆಯ ।
ಭವನದತ್ತಲು ತಿರುಗಿದನು ಮಂತ್ರೀಶ ದುಗುಡದಲಿ ॥೬॥

ಯುವತಿಯರ ಗುಜುಗುಜಿನ ಶೂನ್ಯೋ ।
ತ್ಸವದ ನೃಪಮಂದಿರವ ಜಾಡ್ಯದ ।
ಜವನಿಕೆಯ ಜಂಜಡವ ಕಾಣುತ ನುಡಿದನಿಂತೆಂದದು ॥
ಅವನಿ ನಮಗೆಯಸಾಧ್ಯವೆಂಬೀ ।
ವ್ಯವಹರಣೆ ಗೋಚರಿಸುತಿದೆ ಸಂ ।
ಭವಿಸಲುತ್ತರವೆಂದನಾರಘುಪತಿ ಸುಮಂತ್ರಂಗೆ ॥೭॥

ಹೃದಯ ಕಳವಳಿಸಿದದು ಕಂಗಳ ।
ಹೊದಿಸಿದುವು ನಯನಾಂಬು ಮರುವಾ ।
ತುದಿಸದೊಯ್ಯನೆ ಬಾಗಿದನು ಮಂತ್ರೀಶ ಮಸ್ತಕವ ॥
ಬೆದರಿದನು ರಘುಪತಿ ಸುಮಂತ್ರನ ।
ವದನಚೇಷ್ಟೆಯ ಕಂಡು ತಂದೆಯ ।
ಹದನದೇನೆಂದರಸನಿದ್ದೆಡೆಗಾಗಿ ನಡೆತಂದ ॥೮॥

ವಿತತಗಳಿತಾಶ್ರುಪ್ರಕರಪೂ ।
ರಿತನಿಮೀಲಿತನೇತ್ರನಿರ್ಗತ ।
ಗತವಚೋವಿಹ್ವಲನ ಶೋಕೋದ್ರೇಕಪರವಶನ ॥
ಸತಿಯ ಕರ್ಕಶಕಲುಷವ ಗಸಿ ।
ಹತಿನಿರೋಧಿತಹೃದಯಬಾಧಾ ।
ಸ್ಥಿತನ ಕಾಣುತ ಕೈಯ ಕದಪಿನಲಿರ್ದನಾರಾಮ ೧೭॥

ತರಣಿವಂಶದ ಸಾರ್ವಭೌಮರಿ ।
ಗೆರವಲಾ ದುಶ್ಚಿತ್ತ ಮನುಕುಲ ।
ದರಸುಗಳಿಗೆ ವಿಷಾದವದು ತಾನಪ್ರಸಿದ್ಧವಲೆ ॥
ಅರಿವಿಜಯವೀರರಿಗೆ ಚಿಂತಾ ।
ಸ್ಪರುಶವುಂಟೇ ಜೀಯ ಯೋಗೋ ।
ತ್ಕರುಷದೇಹವ್ಯಥೆಯದೇಕೆಂದಾತ ಬೆಸಗೊಂಡ ॥೧೮॥

ಮಗನೆ ಬಂದ್ಯೈ ಮನುಕುಲಾಂಬರ ।
ಗಗನಮಣಿ ಬಂದ್ಯೈ ಮನೋರಥ ।
ಸುಗುಣ ಬಂದ್ಯೈ ಸೂನೃತವ್ರತ ಬಂದೆಯ್ಯೆ ಎನುತ ॥
ಒಗುವ ನಯನೋದಕದಲರೆದಿ ।
ಟ್ಟಿಗಳ ನೋಟದಲಪ್ಪಿ ಸತ್ಯದ ।
ತಗಹಿನವನೀನಾಥನಾರಘುನಾಥಗಿಂತೆಂದ ॥೧೯॥

ಕಂದ ಕೇಳೆನ್ನಣುಗ ಕೇಳಾ ।
ನೊಂದ ನೆನೆದರೆ ದೈವ ತಾ ಬೇ ।
ರೊಂದ ನೆನೆದುದು ದೈವಗತಿಗೀಕೈಕೆಯನು ಸಾರಿ ॥
ಎಂದು ಮೇಲುತ್ತರಕೆ ನಾಲಗೆ ।
ಬಂದು ಬಂದೊಳಸರಿದು ಮೆಲ್ಲನೆ ।
ನಿಂದು ಬಳಿಕೀನೃಪತನೆಂದನು ಕಲಿಸುಮಂತ್ರಂಗೆ ॥೧೨॥

ಈಸುದಿನಪರಿಯಂತ ವಿಭವದ ।
ವಾಸ ಸೊಬಗಿನ ಸೆಜ್ಜೆ ಸುಖದ ಸು ।
ದೇಶ ಸುಮ್ಮಾನದ ಸುಧಾಂಬುಧಿ ಸಿರಿಯ ನೆಲೆವೀಡು ॥

ಲೇಸಿಗಾಗರ ಶುಭದ ಬಹಳಿತ ।
ಕೋಶ ಸಂತಸದಿಕ್ಕೆ ಸೊಂಪಿನ ।
ವಾಸವಾಗಿರ್ದುದು ನಿವಾಸವಿದೆಂದನಾ ಭೂಪ ॥೧೩॥

ಅಶುಭದಾಡುಂಬೊಲನು ಕುಹಕದ ।
ಪಸರ ಚಿಂತೆಯ ಸಂತೆ ದುಃಖದ ।
ವಸತಿ ದುಗುಡದ ಬೀಡು ದುಮ್ಮಾನದ ಜನಸ್ಥಾನ ॥
ಅಸುಖದಾರವೆ ಭೇದ ಪುದಿದಾ ।
ಯಸದ ಜಾಳಿಗೆ ಜವನ ಮನೆ ರ ।
ಕ್ಕಸಿಯ ಮಠವಾಯ್ತಿಂದು ಭವನವಿದೆಂದನಾ ಭೂಪ ॥೧೪॥

ಹೇಳಿ ಫಲವೇನೆಲೆ ಸುಮಂತ್ರಕ ।
ಮೇಲನರಿಯದ ಕೊಟ್ಟೆನೀಘಾ ।
ತಾಳಿಗಸುರಾಮರರ ಸಂಗ್ರಾಮದಲಿ ವರವೆರಡ ॥
ಬಾಳ ಚಾಚಿದಳಿವಳೆನಗೆ ಗೋ ।
ನಾಳಿಗೊಡ್ಡಿದ ಬಂದು ತಂದೀ ।
ನಾಲಗೆಗೆ ನರಸುಕ್ಕನಿಕ್ಕಿದಳಿವಳು ತನಗೆಂದ ॥೧೫॥

ಬಟ್ಟೆಗುತ್ತರವಿದ್ಯವರಿಯದೆ ।
ಕೊಟ್ಟರುಂಟೆಲೆ ಮಂತ್ರಿಕೇಳ್ ಮನ ।
ಮುಟ್ಟೆ ನುಡಿಯಲಿ ಭಾವಿಸದೆ ಸದ್ಧರ್ಮಮಾರ್ಗದಲಿ ॥
ಕೊಟ್ಟವರವೆರಡುಂಟು ಬೇಡದೆ ।
ಕೊಟ್ಟರವರಿಂದೀಗ ಹೊದಕುಳಿ ।
ಗುಟ್ಟುತಿಹರಿದನರಿಯೆ ನೀಕೇಳೆಂದಳಾ ಕೈಕೆ ॥೧೬॥

ಬಂದುದೆನೆಗಪಕೀರ್ತಿ ರಾಜ್ಯವ ।
ನೊಂದುವರದಲಿ ಬೇಡಿದೆನು ನಿಜ ।
ನಂದನಂಗೊಂದರಲಿ ರಾಮಂಗಡವಿಯೊಡೆತನವ ॥
ಇಂದುಮುಖಿಯರ ಸಾಕ್ಷಿಯಲಿ ವೊದ ।
ಲೊಂದಿಸಿದರೆನಗೀವರವ ನೀಂ ।
ಬಂದ ಬಳಿಕನುಮಾನವಾಗಿದೆ ನಿಮ್ಮರಾಯರಿಗೆ ॥೧೭॥

ಮನುಕುಲದ ರಾಯರಲಿ ಹುಸಿ ಸಂ ।
ಜನಿಸದೆಂದೊಳಗರಿಯದೆನ್ನಯ ।
ತನುಜಗಧಿರಾಜತ್ವವನು ಬೇಡಿದೆನು ನಿಮ್ಮವರ ॥
ಇನಿತು ಸತ್ಯಕೆ ಮರಳದಲೆಯಿರ ।
ಲಿನಿತು ದೊಡ್ಡಿತೆ ಸಾಕು ರಘುನಂ ।
ದನಗೆ ಪಟ್ಟವ ಕಟ್ಟಿ ನೀಂ ನೆರಹೆಂದಳಾ ಕೈಕೆ ॥೧೮॥

ಈತನೇನು ದಧೀಚಿ ಶಿಬಿ ಜೀ ।
ಮೂತವಾಹನ ಬಲಿ ಕಪೋತಾ ।
ಖ್ಯಾತರೊಳಗಗ್ಗಳನೆಬೇಡಿದ ವರವನೀಯಲ್ಕೆ ॥
ವಾತದೇಕೆಲೆ ಮಂತ್ರಿ ಸಾಕಿ ।
ನ್ನೀತಕವನಿಯ ಬಯಕೆ ರಘುಸಂ ।
ಜಾತಗಭಿಷೇಕವನು ಮಾಡಲಿಕೆಬ್ಬಿಸವನಿಪನ ॥೧೯॥

ಸುತವಿಯೋಗದಲಳಿಯದಿರನೀ ।
ಕ್ಷಿತಿಪ ನೀವೆಂದುಗ್ರಪಾತಿ ।
ವ್ರತೆಯರೊಳಗಗ್ಗಳರು ನಿಮ್ಮನು ನೆಮ್ಮುಗಪಕೀರ್ತಿ ॥
ಕ್ಷಿತಿಪ ಕುಜನರ ಜಿಹ್ವೆ ಕಡುಕೂ ।
ರಿತು ಕದರ್ಥದಿನವನಿಪಾಲ ।
ಚ್ಯುತಿಗೆ ಮನವನು ಮಾಡುವುದು ನಿಮಗುಚಿತವಲ್ಲೆಂದ ॥೨೦॥

ಬಿಡು ಸುಮಂತ್ರ ಕುಮಂತ್ರಕೃತ್ಯವ ।
ನಡಿಸಬೇಡೆನ್ನೊಡನೆ ರಘುಗಳ ।
ಮಡದಿಯರು ನಗಲೆಮ್ಮ ನೆಮ್ಮಲಿಯಾದ ದುಷ್ಕೀರ್ತಿ ॥
ಒಡೆರಿಸಲಿ ಪುನರುಕ್ತಿ ನಮ್ಮಯ ।
ನುಡಿಗೆ ಹೊಗದಾಂ ಬಲ್ಲೆವೀ ಜಂ ।
ಜಡೆಯತನವನು ಕೆಲಕೆ ಸಾರೆಂದಳು ಸುಮಂತ್ರಕನ ॥೨೧॥

ಇದು ಯಥಾರ್ಥ ಸುಮಂತ್ರ ನೀನಾ ।
ಡಿದ ಸುಭಾಷಿತವೆಂದು ನಂಬಿಹು ।
ದಡಕೆ ಹೊರಹೊಗದಂತೆ ನಡಿಸುವೆವೆಂದು ಮುನಿ ನುಡಿಯೆ ॥

ಗದಿಸಬೇಡಿನ್ನಾ ತನಾಡಿದ ।
ತುದಿಯ ಕೊಸರನ ನಿಮ್ಮ ರಾಯನ ।
ವದನಲಿ ನುಡಿ ಹುಟ್ಟಲೆಂದಳು ಕೈಕೆ ಮುನಿಪತಿಗೆ ॥೨೨॥

ಐಸಲೇ ನೀಂ ಬೇಡಿದುದು ತಾ ।
ನೇಸು ದೊಡ್ಡಿತು ತಂದೆಯಾಡಿದ ।
ಭಾಷೆಗಿವಕೋ ಭಾಷೆಯೆನುತಾಜನನಿಗಾರಾಮ ॥
ಲೇಸು ಮಾಡಿದಿರನೃತವೆಮ್ಮವ ।
ನೀಶನಲಿ ಹೊಗದಂತೆ ಘಟದಲಿ ।
ಕಾಸಿದಿರಿ ಕಲ್ಮಷವನುಗಿದನ್ವಯದ ಭೂಷಣವ ॥೨೩॥

ಭರತನಾಳಲಿ ರಾಜ್ಯವನು ನೀಂ ।
ನರಪತಿಯ ಚರಣಾರವಿಂದದ ।
ಪರಮಸೇವಾನಿರತರಾಗಿರಿ ನಿಮ್ಮನುಜ್ಞೆಯಲಿ ॥
ಚರಿಸುವೆನು ವನವಾಸವನು ಗೋ ।
ಚರಿಸುವೆನು ನೀಂ ನುಡಿದ ವರುಷದ ।
ಪರಿಗಣನ ಪರಿಯಂತವೆಂದನು ಕೈಕೆಗಾರಾಮ ॥೨೪॥

ಆ ಸತಿಯನುಪಚರಿಸಿ ಪಿತನಾ ।
ಯೊಸವನು ಶ್ರುತಿಧರ್ಮಶಾಸ್ತ್ರ ವಿ ।
ಳಾಸವಚನಾಪದಿಂದನುತಾಪವನು ಬಿಡಿಸಿ ॥
ಆ ಸಕಲಲೋಕೈಕಲೀಲಾ ।
ವಾಸ ತೊರವೆಯ ರಾಯನಾ ವನ ।
ವಾಸವನು ಕೈಕೊಂಡನಮರೇಂದ್ರಾದಿಗಳು ನಲಿಯೆ ॥೨೫॥

೫. ಕೊಳಲಗಾನ.

ಅಚ್ಯುತ ಪ್ರಭುವರ್ಯ ! ಏನು ಚಿತ್ರವೋ !! ಅಹ !!!
ಹುಚ್ಚು ಹಿಡಿಸಿತು ನಿನ್ನ ಕೊಳಲಗಾನ ।
ಕಿಚ್ಚು ಕಲ್ಲುಗಳೆಲ್ಲ ಕರಗಿ ನೀರಾದುವು ।
ಅಚ್ಚರಿ ಮುನಿಗಳು ಮರುಳಾದರು ॥೧॥

ಜಡವಸ್ತುಗಳಿಗೆಲ್ಲ ಜ್ಞಾನವುಂಟಾಯಿತು ।
ಗಿಡಮರವೆಲ್ಲವೂ ಗೋಪರಿಂದ ।
ಒಡಗೂಡಿ ಹೂತುಂಬಿ ಕಿಲಿಕಿಲಿ ನಗುತಲಿ
ಕೊಡುತಿದೆ ಮಕಂದ ಮಾಧುರ್ಯವ ॥೨॥

ಕಾಳಾಹಿ ಕಕ್ಕುವದು ಕರ್ಕೋಟವಿಷವಲ್ಲ
ಕಮನೀಯವಮೃತವ ಕರೆಯುತಿದೆ ।
ಕ್ರೂರವ್ಯಾಘ್ರನು ತಾನು ಜಾತಿವೈರವ ಬಿಟ್ಟು
ಗೋವಿನ ಸಂಗಡ ನಲಿಯುತಿದೆ ॥೩॥

ಒಂದೊಂದೂ ಪೊಂದಿಹುದು ಈ ಪರಿಯ ಹೊಸರೂಪ
ಚೆಂದದಿಂ ಕಾಂಬುದು ಪುಸಿಯಲ್ಲವೈ ।
ಸುಂದರಾಕಾರನೆ ನೀನಂತೂ ಸರ್ವರೊಳ್
ಒಂದಾಗಿ ಪರಬ್ರಹ್ಮನಾದೆಯಾಹ ! ॥೪॥

ನಂದನಂದನ ! ಕಂದ ! ಮುದ್ದು ಮೋಹನ ಕಂದ !
ಅರವಿಂದನಾಭ ! ಮುಕುಂದ !
ಇಂದೀವರಾಕ್ಷನೆ ! ಸುಂದರ ವಿಗ್ರಹ !
ಇಂದ್ರಾದಿ ವಂದಿತ ! ಗೋವಿಂದ

೬. ಸಂಕಲ್ಪ

[ಕೈಲಾಸವಾಸ ಗೌರೀಶ ಈಶ! ಎಂಬ ಧಾಟಿಯಂತೆ]

ಪರಿಶುದ್ಧವಾಗಿಡುವೆನೀ ತನುವನು ।
ಪರಮೇಶನಿನ್ನದದು ನಿಲಯವೆಂದರಿತು

ಇದು ಸತ್ಯವಿದಸತ್ಯವೆಂದರಿಯಲೆಂದನಗೆ ।
ಸದಯಾತ್ಮ! ಮತಿಯ ನೀನಿತ್ತೆಯೆಂದರಿತು ॥
ಹೃದಯದಲಿ ನಾನಿನ್ನು ಪುಸಿಗೆಡೆಯನೀಯದೆಯೆ ।
ಮುದದೆ ನಿನ್ನಾಜ್ಞೆಯೊಳೆ ವರ್ತಿಸುವೆನಯ್ಯಾ ! ॥೧॥

ಹಲವು ಬಗೆಯಿಂದೆನ್ನೊಳಿರಿಸಿ ಚೈತನ್ಯವನು ।
ನೆಲಸಿರುವೆಯೆನ್ನಂತರಂಗದೊಳು, ದೇವಾ ! ॥
ಮಲಿನವೆಂಬುದನೆಲ್ಲಪನು ತೊಳೆದು, ನಲ್ಮೆಯಾ ।
ಆಲರಿನಿಂದದನಂದಗೊಳಿಸುಪೆನು, ತಂದೆ ! ॥೨॥

ಕರುಣಾಳು ! ನಿನ್ನಿಂದೆ ಸಂಚಲನಶಕ್ತಿಯಿದು ।
ತೋರೆತಿರುವುದೆನಗೆಂದು ನಾನರಿತು ನಂಬಿ ॥
ತೊರೆದು ಕಾರ್ಪಣ್ಯವನು ನಿನ್ನ ಸದ್ರೂಪವನೆ ।
ಮೆರೆಯಿಸುವ ಕೃತಿಗಳನೆ ಕೈಕೊಳ್ವೆನಯ್ಯಾ ! ॥೩॥

ಓಂ

ಹರಿಯೆ ನಿನ್ನೊಳು ಭಕ್ತಿ ಮುಕ್ತಿಗೆ ।
ಸರಳಮಾರ್ಗವದೆಂಬುದರಿಯದೆ ।
ತಿರುತಿರುಗಿ ಮಾಯಾ-ಪ್ರಪಂಚದಿ
-ಸುತ್ತಿ ಬೇಸತ್ತೆ ॥

ಪರಮಭಕ್ತಿಯೊಳೀಗ ನಿನ್ನಯ ।
ಚರಣತಲದಲಿ ಬಿದ್ದು ಬೇಡುವೆ ।
ಪರಿಹರಿಸೊ ನರಜನ್ಮವನು ಕೊಂಡೀ
-ಸುಮಾಂಜಲಿಯ ॥

ಆಕಾಂಕ್ಷೆ,

ಕವಿಯಾನು ರವಿಯಾನು ಕವಿರವೀಂದ್ರನೆ ನಾನು ।
ಬುವಿಯೊಳಿಮಗಾರಿನ್ನು ಸಮರೆನುವ ಕವಿಗಳೇ ।
ಸವಿನಯದೊಳೆರಗಿ ಬೇಡುದೆ ‘ ದಯದೆ ನಿಮ್ಮೊಳೀ ನೋಡಿರೈ
ನಿಮ್ಮ ಗುಣವ ’ ॥

ತವರೂರ-ತಾಯ್ನಾಡ-ತಾಯ್ನುಡಿಯ ಹಿತಕಾಗಿ ।
ಸುವಿಶಾಲಮತಿಯೆನಿಸಿ ನೀವೆಸಗಿದಾವ ಕೃತಿ ।
ಸ.ವಿಚಾರ ಸತ್ಕಾರ್ಯ ಬೋಧೆಯಿಂ ಜನಜಾಗೃತಿಯ
ಕಾರ್ಯವೆಸಗುತಿಹುದು ॥೧॥

ನೀನಾರು?

ಕವಿಯಾಗಿ ಜನಿಸಿಲ್ಲ ಕಾವ್ಯಗಳ ತಿಳಿದಿಲ್ಲ ।
ಕವಿಗುರುವ ನಮಿಸಿ ಸೇವಿಸಿ ವರವ ಪಡೆದಿಲ್ಲ ।
ಕವಿವರರ ಮನೆಯ ಮುಂದಣ ಕಾವ್ಯ ತರುವೀವ
ನೆಳಲೊಳಿಹೆ ಭಿಕ್ಷೆಗಾರ ॥

ಸುವಿಚಾರಿ ನಾನಲ್ಲ ಸತ್ಕಾವ್ಯವೆಸಗಿಲ್ಲ ।
ಕವಿಯೆಂಬಹಂಕಾರವೆನಗಿಲ್ಲ ಕನ್ನಡದ ।
ಕವಿವರರಿಗೆರಗಿ ಬೇಡುವೆ ನೀದಿರೆನಗಿಷ್ಟು-
ನಾನೊಬ್ಬ ಕನ್ನಡಿಗನು ॥೨॥

ನೀನು ಹಾಡುವುದೇನು?

ಎನ್ನ ತಾಯ್ನುಡಿದೇವಿಗಿಲ್ಲ ಯಶದೊಳಗಾಶೆ ।
ಪನ್ನತಿಕೆ ಪದವಿಯೈಶ್ವರ್ಯಗಳ ಮೇಲೆ ಮನ ।
ವನ್ನಿಡದ ದೇವಿಯನು ಸುತ್ತಿ ಸುಲಿಯುತ್ತಿಹರು
ಸುತ್ತಲಿನ ನಾಡಿನವರು ॥

ಭಿನ್ನ ಧರ್ಮದ ಭಿನ್ನ ಜಾತಿಗಳ ನಡೆನುಡಿಯ ।
ಕನ್ನಡಿಗರೇ ! ನಮ್ಮ ನುಡಿದಾಯಿ ಹಳ-ಚಿಂದೆ ।
ಯನ್ನುಟ್ಟು ಕಣ್ಣೀರ ಮಿಡಿಯುತಿರೆ ನೋಳ್ಪಿರೇ
ಕಣ್ಮುಚ್ಚಿ ನಿದ್ರಿಸುವಿರೀ ॥೩॥

ಎಲ್ಲಿಂದ ಬಂದಳೀ ಪರದೇಶಿ ಬಡವೆಯಿವ- ।
ಳ್ಗಿಲ್ಲಿರುವುದಾವಾಸವಳುತಿರುವಳೇಕಿವ- ।
ಳ್ಗಿಲ್ಲವೇ ಪೊರೆವ ಮಮತೆಯ ಮಕ್ಕಳೆಂದಪರು ಪರರು
ಋಷಿಶಾಪದಿಂದೆ ॥

ಕಲ್ಲಾಗಿ ಬಿದ್ದ ರಮಣಿಯ ತೆರೆದೊಳಳೆಗಿಳಿಯು ।
ತಿಲ್ಲಿ ನಿಂತಳುತಿಹಳು ಸುರವನಿತೆ ನುಡಿದಾಯಿ ।
ಕಲ್ಲ ವನಿತೆಯ ಗೈದ ರಾಮನಂ ಕರೆವಳೈ
ನೋಡಿರೈ ಕನ್ನಡಿಗರೇ ॥೪॥

ನೀನು ಮಾಡಿದುದೇನು?

ಧನಧಾನ್ಯಹಣಕಾಸು ಗಳಿಸೆ ಬಯಸದಲೆ ಮೇಣ್ ।
ತನುವಿನಾಯಾಸಮಂ ಮನದ ಬೇಸರವನಾ ।
ನೆಣೆಕೆಗೊಳದಲೆ ಸತತ ಹಸಿವೆ ನೀರಡಿಕೆಗಳ ಗಣಿಸದಲೆ
ವಾಣಿದೇವಿ॥

ನಿನಗಾಗಿ ಮಾಲೆಗಳ ರಚಿಸುವೊಡೆ ಸಂಚರಿಸಿ ।
ವನ-ಕುಸುಮಗಳ ರಾಶಿ-ರಾಶಿಗಳ ಸಂಗ್ರಹಿಸಿ ।
ಮನದ ಮೋಹದ ಬಳ್ಳಿಯಲಿ ಸರವ ಸುರಿಯುತಿರೆ
ಹಗಲು ಕಳೆದಿರುಳು ಬಹುದು ॥೫॥

ಮತ್ತು

ತನುವ ಮಾರದೆ ಹಣವ-ಗಳಿಸುವೊಡೆ ನಿನಗಾಗಿ ।
ಮನವ ಕೊರಗಿಸಿದೆನ್ನೈ ಪರಸೇವೆಯಲಿ ಸತತ ।
ಜನುಮದಾತನ ಸೇವೆಗೂ ಸ್ಮರಣೆಗೂ ಸಮಯ
ವುಳಿಯದೌ ತಾಯೆ ಮಾಯೆ ॥

ನಿನಗೇನಾಯಿತೀಗ?

ಒಣಗಿದೆಲೆಗಳ ಕಳೆವ ಗಿಡಗಳಾಸರ ಬೇಕು ।
ಬಣಗುನುಡಿಗಾಶ್ರಯದ ಮನುಜನಾಶ್ರಯ ಬೇಡ ।
ಗುಣವ ಮರೆಯಿಸಿ ಕಠಿಣ ವಚನಗಳ ಟೀಕೆಯಿಂ
ಮೈದೊಗಲ ಸುಲಿವನವನು ॥೬॥

ಸರುವವನು ಸರಸತಿಯ ಸೇವೆಗರ್ಪಿಸಿದೆನಗೆ ॥
ಗರುವದಲಿ ಕನ್ನಡಿಗರೊಲಿದಿತ್ತ ನೆರವಿದ್ದೈ ।
ಕರಗಿ ಕೊರಗಿದ ಹೀನ ದೀನ ವೇಷದೊಳಿರುವೆ
ನಾನೊಬ್ಬ ಭಿಕ್ಷೆಗಾರ ॥

ನೀನು ಬೇಡುವದೇನು?

ಸರಸ-ಕವಿತಾ-ಲತೆಗೆ ದಯದೆ ನೀವ್-ಮೈದೊಳೆದ ।
ಪರಮಾನ್ನವುಂಡು ಕೈದೊಳೆದ ನೀರಾದೊಡಂ ।
ಹರಿವಂತೆ ಮಾಡಿರೈ ! ಕೊಳ್ಳಿರೈ ತನಿವಣ್ಣ !
ನಾನೊಬ್ಬ ಕನ್ನಡಿಗನು ॥೭॥

-ನಾರಾಯಣ